## ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಅರಕಲಗೂಡು

**ಸಿ ಸಿ ನಂಃ 751/2021**

| | | | | | |
|---|---|---|---|---|---|
| **ಸಾಕ್ಷಿಯ ಹೆಸರು** | ಃ | ಡಾ|| ರವಿಶಂಕರ್ ಬಿ ಎಂ | **ದಿನಾಂಕ** | ಃ | **07/11/2024** |
| **ತಂದೆಯ ಹೆಸರು** | ಃ | ಎಂ ಬಿ ಮಂಜುನಾಥ | **ಸಿ ಡಬ್ಲ್ಯೂ** | ಃ | **07** |
| **ವಯಸ್ಸು** | ಃ | **35** ವರ್ಷ | **ಪಿ ಡಬ್ಲ್ಯೂ** | ಃ | **07** |
| **ಉದ್ಯೋಗ** | ಃ | ವೈದ್ಯಾಧಿಕಾರಿಗಳು,<br>ಸಮುದಾಯ ಆರೋಗ್ಯ ಕೇಂದ್ರ ,<br>ದೊಡ್ಡಕುಂಚೀವು, ಹೊಳೆನರಸೀಪುರ | | | |
| **ವಿಳಾಸ** | ಃ | ಹೊಳೆನರಸೀಪುರ | | | |

ಸಾಕ್ಷಿಯನ್ನು ದಿನಾಂಕ **07.11.2024** ರಂದು ಕರೆಸಿ **ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಸಸಅ ರವರಿಂದ ಃ-**

ನಾನು ಕಳೆದ **2018** ರಿಂದ **2021** ರವರೆಗೆ ನಾನು ಸಾರ್ವಜನಿಕ ಆಸ್ಪತ್ರೆ, ಅರಕಲಗೂಡಿನಲ್ಲಿ ಅರವಳಿಕೆ ತಜ್ಞರಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ **15.04.2021** ರಂದು ನಾಗರಾಜು, ರೇಖಾ ಮತ್ತು ಜಯಮ್ಮ ಎಂಬುವರು ನನ್ನ ಬಳಿ ರಾತ್ರಿ **8.00** ಗಂಟೆಗೆ ಬಂದಿರುತ್ತಾರೆ. ಅವರಿಗೆ ಹೊಡೆದ ಸಂಬಂದ ಸದರಿ ವ್ಯಕ್ತಿಗಳು ನನ್ನ ಬಳಿ ಬಂದಿರುತ್ತಾರೆ. ಅವರುಗಳನ್ನು ಪರೀಕ್ಷಿಸಿದ್ದು ಜಯಮ್ಮರವರಿಗೆ ಕತ್ತಿನ ಹಿಂಭಾಗ ಮತ್ತು ಎಡಭುಜಕ್ಕೆ ಪೆಟ್ಟು ಬಿದ್ದಿದ್ದು ಕಂಡುಬಂದಿರುತ್ತದೆ. ನನ್ನ ಅಬಿಪ್ರಾಯದಲ್ಲಿ ಸದರಿ ಗಾಯವು ಸಾಮಾನ್ಯ ಸ್ವರೂಪದ ಗಾಯವಾಗಿರುತ್ತದೆ.

ರೇಖಾರವರನ್ನು ಪರೀಕ್ಷಿಸಿದ್ದು ಅವರ ತಲೆಯ ಎಡಭಾಗದಲ್ಲಿ ಚಿಕ್ಕ ಗಾಯ 1 ಇಂಟು 1 ಸೆಂ ಮೀ (ಓಪನ್ ವುಂಡ್) ಆಗಿರುತ್ತದೆ. ಸದರಿ ಗಾಯವು ಸಾಮಾನ್ಯ ಸ್ವರೂಪದ ಗಾಯವಾಗಿರುತ್ತದೆ.

ನಾಗರಾಜು ರವರನ್ನು ಪರೀಕ್ಷಿಸಿದ್ದು ಅವರ ಎದೆಯ ಮುಂಭಾಗವನ್ನು ಒತ್ತಿದಾಗ ಅವರಿಗೆ ನೋವು ಇರುವುದನ್ನು ಕಂಡುಬಂದಿರುತ್ತದೆ ಮತ್ತು ಎಡಕಾಲಿನ ಮದ್ಯದಲ್ಲಿ **1** ಇಂಟು **1** ಸೆಂ ಮೀ ನ ಗಾಯವೊಂದು ಕಂಡುಬಂದಿರುತ್ತದೆ ಮತ್ತು ಆ ಜಾಗದಲ್ಲಿ ಊತ ಕಂಡುಬಂದಿರುತ್ತದೆ. ಸದರಿ ಗಾಯವು ಸಾಮಾನ್ಯ ಸ್ವರೂಪದ ಗಾಯವಾಗಿರುತ್ತದೆ.

ದಿನಾಂಕ **22.04.2021** ರಂದು ಸದರಿ ಸಾಕ್ಷಿಯು ನೀಡಿದ ನಾಗರಾಜು ಬಿನ್ ಅಣ್ಣಯ್ಯ ರವರ ಗಾಯದ ಪ್ರಮಾಣಪತ್ರವನ್ನು ನಿಪಿ **4** ಎಂದು, ಮತ್ತು ಸದರಿ ಸಾಕ್ಷಿಯ ಸಹಿಯನ್ನು ನಿಪಿ **4**(ಎ) ಎಂದು ಗುರುತಿಸಲಾಯಿತು.

ದಿನಾಂಕ **22.04.2021** ರಂದು ಸದರಿ ಸಾಕ್ಷಿಯು ನೀಡಿದ ಜಯಮ್ಮ ರವರ ಗಾಯದ ಪ್ರಮಾಣಪತ್ರವನ್ನು ನಿಪಿ **5** ಎಂದು, ಮತ್ತು ಸದರಿ ಸಾಕ್ಷಿಯ ಸಹಿಯನ್ನು ನಿಪಿ **5**(ಎ) ಎಂದು ಗುರುತಿಸಲಾಯಿತು.

ದಿನಾಂಕ **22.04.2021** ರಂದು ಸದರಿ ಸಾಕ್ಷಿಯು ನೀಡಿದ ರೇಖಾ ರವರ ಗಾಯದ ಪ್ರಮಾಣಪತ್ರವನ್ನು ನಿಪಿ **6** ಎಂದು, ಮತ್ತು ಸದರಿ ಸಾಕ್ಷಿಯ ಸಹಿಯನ್ನು ನಿಪಿ **6**(ಎ) ಎಂದು ಗುರುತಿಸಲಾಯಿತು.

ಆರೋಪಿ ಪರ ಪಾಟೀ ಸವಾಲುಃ- ಶ್ರೀ.ಜಿ.ಡಿ.ಎಂ. ವಕೀಲರಿಂದಃ

ನಾಗರಾಜು, ಜಯಮ್ಮ ಮತ್ತು ರೇಖಾರವರೊಂದಿಗೆ ಬೇರೆ ಯಾರೂ ಬಂದಿರುವುದಿಲ್ಲ. ನಿಪಿ **4** ರಿಂದ **6** ರಲ್ಲಿ ಸದರಿ ವ್ಯಕ್ತಿಗಳಿಗೆ ಯಾರು ಯಾವ ಭಾಗಕ್ಕೆ ಹೊಡೆದಿರುತ್ತಾರೆ ಎಂಬುದನ್ನು ನಮೂದಿಸಿರುವುದಿಲ್ಲ. ನಿಪಿ **4** ರಿಂದ **6** ರಲ್ಲಿ ಗಾಯದ ವಯಸ್ಸನ್ನು ನಮೂದು ಮಾಡಿರುವುದಿಲ್ಲ. ನಿಪಿ **4** ರಿಂದ **6** ರಲ್ಲಿ ಕಂಡುಬರುವ ಗಾಯಗಳು ಸಾಮಾನ್ಯವಾಗಿ ಗಟ್ಟಿ ನೆಲದ ಮೇಲೆ ಬಿದ್ದಾಗಲೂ ಸಹ ಆಗುತ್ತದೆ ಎಂದರೆ ಸರಿ.

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು

ಓ.ಹೇ.ಕೇ.ಸ.ಇದೆ.

ಜೆಎಂಎಫ್‌ಸಿ, ಅರಕಲಗೂಡು

# ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಅರಕಲಗೂಡು

**ಸಿ ಸಿ ನಂಃ378/2018**

| | | | | | |
|---|---|---|---|---|---|
| **ಸಾಕ್ಷಿಯ ಹೆಸರು** | ಃ | ಡಾ|| ರೇವಣ್ಣ | **ದಿನಾಂಕ** | ಃ | **20/11/2021** |
| **ತಂದೆಯ ಹೆಸರು** | ಃ | ಮರಿಬಸವಯ್ಯ | **ಸಿ ಡಬ್ಲ್ಯೂ** | ಃ | **04** |
| **ವಯಸ್ಸು** | ಃ | **49** ವರ್ಷ | **ಪಿ ಡಬ್ಲ್ಯೂ** | ಃ | **05** |
| **ಉದ್ಯೋಗ** | ಃ | ವೈದ್ಯಾಧಿಕಾರಿ, ಜನರಲ್ ಆಸ್ಪತ್ರೆ , ಮೈಸೂರು. | | | |
| **ವಿಳಾಸ** | ಃ | ಮೈಸೂರು. | | | |

**ಪ್ರಮಾಣ ವಚನ ಬೋಧಿಸಲಾಯಿತು.**
**ಮುಖ್ಯ ವಿಚಾರಣೆ ಸಸಅ ರವರಿಂದ ಃ-**

ನಾನು **2013** ಆಗಸ್ಟ್ ತಿಂಗಳಿನಿಂದ **2019** ಆಗಸ್ಟ್ ನಾನು ಅರಕಲಗೂಡು ಸಾರ್ವಜನಿಕ ಆಸ್ಪತ್ರೆಯಲ್ಲಿ ವೈದ್ಯಾದಿಕಾರಿಯಾಗಿ ಕೆಲಸ ನಿರ್ವಹಿಸಿರುತ್ತೇನೆ. ಸುತ್ತಿದ್ದೇನೆ.

ದಿಃ**21/05/2017**ರಂದು ಸಂಜೆ **7-00** ಗಂಟೆ ಸಮಯದಲ್ಲಿ ಚಾಸಾ-**1**ಮತ್ತು **2** ರವರು ಹಲ್ಲೆಯ ಹಿನ್ನೆಲೆಯಲ್ಲಿ ನನ್ನ ಬಳಿ ಚಿಕಿತ್ಸೆಗಾಗಿ ಬಂದಿದ್ದರು. ಚಾಸಾ **1** ಮತ್ತು **2** ರವರು ಅದೇ ದಿನ ಸಂಜೆ ಸುಮಾರು **7-00** ಗಂಟೆ ಸಮಯದಲ್ಲಿ ಹಲ್ಲೆಯಾಗಿದೆ ಎಂದು ತಿಳಿಸಿದರು. ಚಾಸಾ **1** ರವರನ್ನು ಪರೀಕ್ಷಿಸಲಾಗಿಃ-

**1.** ಬಲಗಾಲು ನೋವಿನಿಂದ ಕೂಡಿತ್ತು ಮತ್ತು ಗಾಯದ ಸ್ವರೂಪದ ಸಾಮಾನ್ಯ ಸ್ವರೂಪದ್ದಾಗಿತ್ತು.

ನಾನು ನೀಡಿದ ಗಾಯದ ಪ್ರಮಾಣಪತ್ರವನ್ನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿ ನಿಪಿ **5** ನ್ನು ನೋಡಿ ಗುರುತಿಸುತ್ತಾರೆ. ಸಾಕ್ಷಿ ಸಹಿಯನ್ನು ನಿಪಿ **5**(ಬಿ) ಎಂದು ಗುರುತಿಸಲಾಯಿತು.

ಚಾಸಾ **2** ರವರನ್ನು ನಾನು ಪರೀಕ್ಷಿಸಲಾಗಿಃ

**1.** ಎದೆಯ ಮದ್ಯಭಾಗ ನೋವಿನಿಂದ ಕೂಡಿತ್ತು ಮತ್ತು ಗಾಯದ ಸ್ವರೂಪದ ಸಾಮಾನ್ಯ ಸ್ವರೂಪದ್ದಾಗಿತ್ತು.

ನಾನು ನೀಡಿದ ಗಾಯದ ಪ್ರಮಾಣಪತ್ರವನ್ನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿ ನಿಪಿ **6** ನ್ನು ನೋಡಿ ಗುರುತಿಸುತ್ತಾರೆ. ಸಾಕ್ಷಿ ಸಹಿಯನ್ನು ನಿಪಿ **6**(ಬಿ) ಎಂದು ಗುರುತಿಸಲಾಯಿತು.

ಸದರಿ ಗಾಯಗಳು ಕೈಗಳಿಂದ ಎಳೆದಾಡಿ ಹಲ್ಲೆ ಮಾಡಿದಾಗ ಮೇಲೆ ಹೇಳಿದ ಗಾಯಗಳು ಆಗುವ ಸಾಧ್ಯತೆ ಇರುತ್ತದೆ.

ಆರೋಪಿ ಪರ ಪಾಟೀ ಸವಾಲುಃ- ಶ್ರೀ. ಹೆಚ್ ಆರ್ ಎನ್ ವಕೀಲರಿಂದ,

ಚಾಸಾ **1** ಮತ್ತು **2** ರವರು ನನ್ನ ಮುಂದೆ ಚಿಕಿತ್ಸೆಗೆ ಹಾಜರಾದಾಗ ಬೇರೆ ಯಾರು ಚಿಕಿತ್ಸೆಗೆ ಬಂದಿರಲಿಲ್ಲ. ನಾನು ಚಾಸಾ **1** ಮತ್ತು **2** ರವರನ್ನು ವಿಚಾರಿಸಿದಾಗ ಸದರಿಯವರು ನನಗೆಕೈಗಳಿಂದ ಹಲ್ಲೆ ಮಾಡಿದ್ದಾರೆ ಎಂದು ತಿಳಿಸಿದರು. ಕೈಗಳಿಂದ ಚಾಸ **1** ಮತ್ತು **2** ರವರಿಗೆ ಹೊಡೆದು ಗಾಯಗಳಾಗಿವೆ ಎಂದು ನಾನು ನೀಡಿದ ಗಾಯದ ಪ್ರಮಾಣಪತ್ರದಲ್ಲಿ ನಮೂದಿಸಿಲ್ಲ. ಚಾಸ **1** ಮತುತ **2** ರವರಿಗೆ ಯಾರು ಹಲ್ಲೆ

ಮಾಡಿದರು ಎಂದು ನಾನು ಕೇಳಲಿಲ್ಲ , ಅವರೂ ಕೂಡ ನನಗೆ ತಿಳಿಸಲಿಲ್ಲ. ಕೈಗಳಿಂದ ಹೊಡೆದ ಬಗ್ಗೆ ಯಾವುದೇ ಗುರುತುಗಳು ಗಾಯದ ಮೇಲೆ ಇರಲಿಲ್ಲ. ಕೃಷಿ ಚಟುವಟಿಕೆಗಳನ್ನು ಮಾಡುವಾಗ ಸದರಿ ಈ ಗಾಯಗಳು ಆಗುವ ಸಾದ್ಯತೆ ಇರುತ್ತದೆ.

ಮರುವಿಚಾರಣೆ ಇಲ್ಲ

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು

ಓ.ಹೇ.ಕೇ.ಸ.ಇದೆ.

ಜೆಎಂಎಫ್‌ಸಿ, ಅರಕಲಗೂಡು

## ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಅರಕಲಗೂಡು

**ಸಿ ಸಿ ನಂಃ 3/2011**

| | | | | | |
|---|---|---|---|---|---|
| ಸಾಕ್ಷಿಯ ಹೆಸರು | ಃ | ಡಾಃಶೀದ.ಲ್‌ಕುಮಾರ್ | ದಿನಾಂಕ | ಃ | 24-04-2013 |
| ಗಂಡನ ಹೆಸರು | ಃ | ರಾಜೇಂದ್ರಕುಮಾರ್ | ಸಿ ಡಬ್ಲ್ಯೂ | ಃ | 07 |
| ವಯಸ್ಸು | ಃ | 55 ವರ್ಷ | ಪಿ ಡಬ್ಲ್ಯೂ | ಃ | 07 |
| ಉದ್ಯೋಗ | ಃ | ವೈದ್ಯಾಧಿಕಾರಿ | | | |
| ವಿಳಾಸ | ಃ | ಕೊಣನೂರು | | | |

**ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಸಸಅ ರವರಿಂದ ಃ-**

ನಾನು 4-7-2010 ರಿಂದ ಇಲ್ಲಿಯವರೆವಿಗೆ ಕೊಣನೂರು ಸರ್ಕಾರಿ ಸಾರ್ವಜನಿಕ ಆಸ್ಪತ್ರೆಯಲ್ಲಿ ವೈದ್ಯಾದಿಕಾರಿಯಾಗಿ ಕೆಲಸ ನಿರ್ವಹಿಸಿರುತ್ತೇನೆ.

ದಿಃ 21-9-2010 ರಂದು ಸಂಜೆ 4 ಗಂಟೆ ಸಮಯದಲ್ಲಿ ಚಾಸಾ-1ರವರು ಹಲ್ಲೆಯ ಹಿನ್ನೆಲೆಯಲ್ಲಿ ನನ್ನ ಬಳಿ ಚಿಕಿತೆ ಬಂದಿದ್ದರು.

ಅವರನ್ನು ಪರೀಕ್ಷಿಸಿದಾಗ

1. ಅವರ ಹೊಟ್ಟೆಯ ಮೇಲೆ ನೋವಿನಿಂದ ಕೂಡಿತ್ತು
2. ತಲೆಯ ಹತ್ತಿರ ನೋವಿನಿಂದ ಕೂಡಿತ್ತು
3. ಬಲತೊಡೆಯಲ್ಲಿ ನೋವಿನಿಂದ ಕೂಡಿತ್ತು.
4. ಎಡತೊಡೆಯಲ್ಲಿ 2 5 ಸೆ.ಮೀ ಉದ್ದದ ಕೆಂಪಾದ ಊತದ ಗಾಯವಿತ್ತು
5. ಬೆನ್ನಿನ ಎಡಕೆಳಭಾಗದಲ್ಲಿ 3 6 ಸೆ.ಮೀ ಉದ್ದದ ಕೆಂಪಾದ ಊತದ ಗಾಯವಿತ್ತು

ನನ್ನ ಅಭಿಪ್ರಾಯದಲ್ಲಿ ಈ ಎಲ್ಲಾ ಗಾಯಗಳು ಸಾಮಾನ್ಯ ಸ್ವರೂಪದ ಗಾಯಗಳಾಗಿರುತ್ತವೆ, ಈ ಬಗ್ಗೆ ನಾನು ಗಾಯದ ಪ್ರಮಾಣ ಪತ್ರವನ್ನು ನೀಡಿದ್ದು, ಅದನ್ನು ನಿಪಿ-4, ಸದರಿಯವರ ಸಹಿಯನ್ನು ನಿಪಿ-4ಎ ಎಂದು ಗುರ್ತಿಸಲಾಯಿತು.

ಆ ದಿನ ಆರೋಪಿತರು ಮರದ ದೊಣ್ಣೆಯಿಂದ ಹಲ್ಲೆ ಮಾಡಿರುತ್ತಾರೆ ಎಂದು ಚಾಸಾ.1ರವರು ತಿಳಿಸಿದರು. ಈ ಮೇಲೆ ಹೇಳಲಾದ ಗಾಯಗಳು ಕೈಗಳಿಂದ ಮತ್ತು ಪ್ಲಾಸ್ಟಿಕ್ ಚಪ್ಪಲಿಯಿಂದ ಹಲ್ಲೆ ಮಾಡಿದರು ಎಂದರೆ ಸಾಕ್ಷಿಯು ನೋವು ಮತ್ತು ಊತ ಗಾಯಗಳಾಗಬಹುದು ಎಂಬುದಾಗಿ ಸ್ವತಃ ನುಡಿಯುತ್ತಾರೆ.

ಪಾಟೀ ಸವಾಲು ಃ ಶ್ರೀ ಎ.ಎಸ್. ವಕೀಲರಿಂದ,

ಯಾವುದೇ ವ್ಯಕ್ತಿ ಜಮೀನಿನ ಬದುವಿನಲ್ಲಿ ಆಯ ತಪ್ಪಿ ಬಿದ್ದರೆ ಈ ಮೇಲೆ ಹೇಳಿದ ಗಾಯಗಳಾಗುವ ಸಾಧ್ಯತೆ ಇದೆ ಎಂದರೆ ಸರಿ.

( ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾ.ದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಇದೆ.

**ಜೆಎಂಎಫ್‌ಸಿ, ಅರಕಲಗೂಡು.**

## ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಅರಕಲಗೂಡು

**ಸಿ ಸಿ ನಂಃ703/2014**

| | | | | | |
|---|---|---|---|---|---|
| **ಸಾಕ್ಷಿಯ ಹೆಸರು** | ಃ | ಡಾ||ರೇವಣ್ಣ | **ದಿನಾಂಕ** | ಃ | **12/02/2020** |
| **ತಂದೆಯ ಹೆಸರು** | ಃ | ಮರಿಬಸವಯ್ಯ | **ಸಿ ಡಬ್ಲ್ಯೂ** | ಃ | **1** |
| **ವಯಸ್ಸು** | ಃ | **48** ವರ್ಷ | **ಪಿ ಡಬ್ಲ್ಯೂ** | ಃ | **1** |
| **ಉದ್ಯೋಗ** | ಃ | ವೈದ್ಯಾಧಿಕಾರಿ, ಕೆ ಆರ್ ಆಸ್ಪತ್ರೆ | | | |
| **ವಿಳಾಸ** | ಃ | ಮೈಸೂರು | | | |

**ಪ್ರಮಾಣ ವಚನ ಬೋಧಿಸಲಾಯಿತು.**
**ಮುಖ್ಯ ವಿಚಾರಣೆ ಸಸಅ ರವರಿಂದ ಃ-**

ನಾನು **2013** ರಿಂದ ಜುಲೈ **2019** ರವರೆಗೆ ಅರಕಲಗೂಡು ಸಾರ್ವಜನಿಕ ಆಸ್ಪತ್ರೆಯಲ್ಲಿ ವೈದ್ಯಾದಿಕಾರಿಯಾಗಿ ಕೆಲಸ ನಿರ್ವಹಿಸಿರುತ್ತೇನೆ.

ದಿಃ**26/03/2014**ರಂದು ನಾನು ಕರ್ತವ್ಯದಲ್ಲಿ ಇದ್ದು ರೂಮ್ ನಂ **15** ರಲ್ಲಿ ಹೊರರೋಗಿ ಚಿಕಿತ್ಸೆ ವಿಭಾಗದಲ್ಲಿ ಕೆಲಸ ಮಾಡುತ್ತಿದ್ದಾಗ ಸುಮಾರು **11.00** ಗಂಟೆ ಸಮಯಕ್ಕೆ ಇಬ್ಬರು ವ್ಯಕ್ತಿಗಳು ಕೂಗಾಡಿ ಕರ್ತವ್ಯಕ್ಕೆ ಅಡ್ಡಿಪಡಿಸಿದರು. ಅವರನ್ನು ಪ್ರಶ್ನಿಸಿದಾಗ ನನಗೆ ಹಲ್ಲೆ ಮಾಡಲು ಯತ್ನಿಸಿದರು. ಅವಾಚ್ಯ ಶಬ್ದಗಳಿಂದ ಬೈಯ್ದು ಎಳೆದಾಡಿದರು. ಸಾರ್ವಜನಿಕರಿಗೆ ತೊಂದರೆಯಾಗುತ್ತದೆ ಸಮಾದಾನದಿಂದ ಇರಿ ಎಂದು ಆರೋಪಿತರಿಗೆ ಹೇಳಿದೆನು. ಅವರನ್ನು ಹಲ್ಲೆಗೆ ಪ್ರಯತಿನಸಿದಾಗ ಸಿಬ್ಬಂದಿಗಳಾದ ಚಾಸಾ **2** ರಿಂದ **4** ರವರು ಸಮಾದಾನಪಡಿಸಿದರು. ಅವರ ಮೇಲೂ ಸಹ ಆರೋಪಿತರು ಕೂಗಾಡಿ ಎಳೆದಾಡಿದರು. ಕೈಗಳಿಂದ ಆರೋಪಿತರು ಬಲಮುಂಗೈಗೆ ಕೈಯಿಂದ ಹಲ್ಲೆ ಮಾಡಿದರು. ಈ ಬಗ್ಗೆ ದೂರು ಕೊಟ್ಟೆ.. ನಾನು ಮತ್ತು ಚಾಸಾ **2** ರಿಂದ **4** ರವರು ಚಿಕಿತ್ಸೆ ಪಡೆದೆವು. ನಂತರ ಈ ಬಗ್ಗೆ ದೂರು ಕೊಟ್ಟಿರುತ್ತೇನೆ. ದೂರನ್ನು ನಿಪಿ **1** ಎಂದು, ಸಾಕ್ಷಿ ಸಹಿಯನ್ನು ನಿಪಿ **1**ಎ ಎಂದು ಗುರುತಿಸಲಾಯಿತು. **2**ನೇ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ. **1**ನೇ ಆರೋಪಿಯ ಹಾಜರಾತಿಯಿಂದ ವಿನಾಯಿತಿ ಪಡೆದಿದ್ದು ನೋಡಿದರೆ ಗುರುತಿಸುವುದಾಗಿ ಹೇಳಿರುತ್ತಾರೆ. ಗುರುತಿಸುವ ಬಗ್ಗೆ ತಕರಾರು ಇಲ್ಲ ಎಂದು ಆರೋಪಿ ಪರ ವಕೀಲರು ತಿಳಿಸಿರುತ್ತಾರೆ.

ನಂತರ ಪೊಲೀಸರು ಮದ್ಯಾಹ್ನ **1.00** ಗಂಟೆಗೆ ಮಹಜರ್ ಮಾಡಲು ಬಂದರು. ಮಹಜರ್ ಗೆ ನಾನು ಮಾಡಿರುತ್ತೇನೆ. ಆಗ ನಮ್ಮ ಗ್ರೂಪ್ ಡಿ ನೌಕರರು ಇದ್ದರು. ಮಹಜರನ್ನು ನಿಪಿ **2** ಎಂದು, ಸಾಕ್ಷಿಯ ಸಹಿಯನ್ನು ನಿಪಿ **2**ಎ ಎಂದು ಗುರುತಿಸಲಾಯಿತು. ಆರೋಪಿತರ ಕೃತ್ಯದಿಂದ ಸಾರ್ವಜನಿಕರಿಗೆ ತೊಂದರೆಯಾಯಿತು. ಘಟನೆ ಬಗ್ಗೆ ಹೇಳಿಕೆ ಕೊಟ್ಟಿರುತ್ತೇನೆ.

( ಈ ಹಂತದಲ್ಲಿ ಮಾನ್ಯ ಸಸಅರವರು ಸದರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ನೀಡಲಾಯಿತು )

ಪಾಟೀ ಸವಾಲು ಃಸಸಅರವರಿಂದ,

ಆರೋಪಿತರ ಕೃತ್ಯದಿಂದ ಕರ್ತವ್ಯಕ್ಕೆ ಅಡ್ಡಿಯಾಯಿತು ಎಂದರೆ ಸರಿ. ಚಾಸಾ3 ರವರಿಗೆ ಹಲ್ಲೆ ಮಾಡಿದ್ದರಿಂದ ಅಪಮಾನ ಆಯಿತು ಎನ್ನುವುದು ಸರಿ. ಅದೇ ದಿನ ಸಂಜೆ **4.30** ರಿಂದ **5.30** ಸುಮಾರಿಗೆ ನಿಪಿ **2** ರಂತೆ ಮಹಜರ್ ಮಾಡಿದರು. ಚಾಸಾ **6, 7** ರವರು ಸ್ಥಳದಲ್ಲಿ ಸಹಿ ಮಾಡಿದರು ಎನ್ನುವುದು ಸರಿ. ನಂತರ ಮರುಹೇಳಿಕೆಯಲ್ಲಿ ನಾನು **1**ನೇ ಆರೋಪಿ ಚಾಸಾ **2** ರವರಿಗೆ ಕೈಯಿಂದ ಹಲ್ಲೆ ಮಾಡಿ ಉಗುರಿನಿಂದ ಪರಚಿ ಗಾಯಪಡಿಸಿರುತ್ತಾರೆ ಮತ್ತು ಎದೆಗೆ ಹಲ್ಲೆ ಮಾಡಿರುತ್ತಾರೆ ಹಾಗೂ **2**ನೇ ಆರೋಪಿ ಕೈಯಿಂದ ಚಾಸಾ **3** ರವರಿಗೆ ಬಲರಟ್ಟೆ , ಕೆನ್ನೆಗೆ ಹೊಡೆದು ನೋವುಪಡಿಸಿದ್ದರು. ಚಾಸಾ **4** ರವರಿಗೆ **2**ನೇ ಆರೋಪಿ ಕೈಯಿಂದ ಮೈಮುಟ್ಟಿ ನೂಕಿ ಮಾನಕ್ಕೆ ಕುಂದುಂಟು ಮಾಡಿರುತ್ತಾರೆ ಎಂದು ಹೇಳಿಕೆ ಕೊಟ್ಟಿರುತ್ತೇನೆ ಎಂದರೆ ಸರಿ.

ಆರೋಪಿ ಪರ ಪಾಟೀ ಸವಾಲುಃ- ಶ್ರೀ ಬಿ ಸಿ ಆರ್ ವಕೀಲರಿಂದ,

ಘಟನೆಯಾಗುವ **9** ತಿಂಗಳು ಮೊದಲು ನಾನು ಇಲ್ಲಿಗೆ ವರ್ಗಾವಣೆಯಾಗಿದ್ದೆ. ನಾನು ಕೊಠಡಿ ಸಂಖ್ಯೆ **15** ರಲ್ಲಿ ಬೆಳಿಗ್ಗೆ **9.45** ಹಾಜರಿದ್ದೆ. ನನಗೆ **8.15** ರಿಂದ ಕರ್ತವ್ಯ ಪ್ರಾರಂಭವಾಗುತ್ತದೆ ಆದರೆ ಅವತ್ತು ಮಾಸಿಕ ಸಭೆ ಮುಗಿಸಿ ಕರ್ತವ್ಯಕ್ಕೆ ಹಾಜರಾಗಿದ್ದೆ. ಅದೇ ಸಾಲಿನಲ್ಲಿ ನಾಲ್ಕು ಓ ಪಿ ಡಿ ಕೊಠಡಿಗಳು ಇವೆ. ಕೊಠಡಿ ಮುಂದೆ **4** ಅಡಿ ಜಾಗ ತಿರುಗಾಡಲು ಇದೆ ಎಂದರೆ ಸರಿ. ಸುಮಾರು **50 – 60** ರೋಗಿಗಳು ಇದ್ದರು. ಆಸ್ಪತ್ರೆಯಲ್ಲಿ ಸುಮಾರು **100 – 150** ರಷ್ಟು ರೋಗಿಗಳು ಹಾಜರಿರುತ್ತಾರೆ ಎಂದರೆ ಇರಬಹುದು. ನಾನು ಮೀಟಿಂಗಿಗೆ ಹೋದ ವಿಚಾರ ಮೊದಲೇ ತಿಳಿಸಿದ್ದರಿಂದ ರೋಗಿಗಳು ಪ್ರಶ್ನೆ ಮಾಡಿಲ್ಲ. ಅಲ್ಲಿ ರೋಗಿಗಳು ಮಾತನಾಡಿ ಗಲಾಟೆ ಮಾಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ರೋಗಿಗಳು ಕ್ಯೂ ಮಾಡುವ ವಿಚಾರಕ್ಕೆ ಸಾಲಾಗಿ ನಿಲ್ಲುವ ವಿಚಾರಕ್ಕೆ ಜಗಳ ಮಾಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ರೋಗಿಗಳು ಮೊದಲು ತೋರಿಸಿಕೊಳ್ಳುವ ಸಲುವಾಗಿ ನೂಕಾಗಿ ಜಗಳ ಮಾಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ಆರೋಪಿತರು ಆ ದಿನ ರೋಗಿಗಳನ್ನು ಬೇಗ ನೋಡಿ ಎಂದು ಕೂಗಾಡಿ ಗಲಾಟೆ ಮಾಡಿಲ್ಲ, ಎಳೆದಾಡಿಲ್ಲ, ಅವಾಚ್ಯ ಶಬ್ದಗಳಿಂದ ಬೈಯ್ದಿಲ್ಲ, ಹಲ್ಲೆ ಮಾಡಿಲ್ಲ ಎಂದರೆ ಸರಿಯಲ್ಲ. ಗಲಾಟೆ **10** ರಿಂದ **15** ನಿಮಿಷದಷ್ಟು ನಡೆದಿರುತ್ತದೆ. ಆ ದಿನ ಯಾವುದೇ ಗಲಾಟೆ ನಡೆದಿಲ್ಲ ನಾನು ಸಮಾದಾನಪಡಿಸಿಲ್ಲ, ಆರೋಪಿತರು ಚಾಸಾ **2** ರಿಂದ **4** ರವರು ಸಹ ಗಲಾಟೆ ಮಾಡಿಲ್ಲ ಎಳೆದಾಡಿಲ್ಲ ಅವಾಚ್ಯ ಶಬ್ದಗಳಿಂದ ಬೈದಿಲ್ಲ ಎಂದರೆ ಸರಿಯಲ್ಲ. ಚಾಸಾ **4** ರವರಿಗೆ ಅವಮಾನವಾಗುವಂತೆ ಎಳೆದಾಡಿಲ್ಲ, ಅವರು ಸ್ಥಳಕ್ಕೆ ಬಂದಿರಲಿಲ್ಲ ಎಂದರೆ ಸರಿಯಲ್ಲ. ಆ ದಿನ ನನಗಾಗಲೀ, ಚಾಸಾ **2** ರಿಂದ **4** ರವರಿಗಾಗಲೀ ಕರ್ತವ್ಯ ನಿರ್ವಹಿಸಲು ಯಾವುದೇ ಅಡ್ಡಿಯಾಗಿಲ್ಲ ಎಂದರೆ ಸರಿಯಲ್ಲ. ನಾನು ಆಡಳಿತ ವೈದ್ಯಾದಿಕಾರಿಗಳಿಗೆ ಫೋನ್ ಮೂಲಕ ತಿಳಿಸಿದೆ. ಅವರು ಮೀಟಿಂಗಿನಲ್ಲಿ ಇದ್ದರು. ನಂತರ ಸ್ಥಳಕ್ಕೆ ಬಂದು ನೋಡಿರುತ್ತಾರೆ. ಅವರಿಗೆ ಮೌಖಿಕವಾಗಿ ತಿಳಿಸಿ ದೂರು ಕೊಟ್ಟಿರುತ್ತೇನೆ. ಆ ದಿನ ಎಂದಿನಂತೆ ಕರ್ತವ್ಯ ನಿರ್ವಹಿಸಿರುತ್ತೇನೆ, ನಂತರ ಯಾವುದೇ ತೊಂದರೆಯಾಗಿಲ್ಲ ಎನ್ನುವುದು ಸರಿ. ದೂರು ಕೊಡಲು **1.00** ಗಂಟೆಗೆ ಹೋಗಿದ್ದೆ. ನಿಪಿ **2** ಕ್ಕೂ ಅಲ್ಲೇ ಸಹಿ ಮಾಡಿರುತ್ತೇನೆ. ಚಾಸಾ **6, 7** ರವರು ಸಹ ಠಾಣೆಯಲ್ಲಿ ಸಹಿ ಮಾಡಿದರು. ಡಾಃ ಧರಣೇಶ್ ರವರು ಸಿ ಎಂ ಓ ಕರ್ತವ್ಯದಲ್ಲಿ ಇದ್ದರು. ಆ ದಿನ ನಾನು ಚಿಕಿತ್ಸೆ ಪಡೆದಿಲ್ಲ ನಮ್ಮ ಸಿಬ್ಬಂದಿಯಾದ್ದರಿಂದ ಅವುಗಳನ್ನು ಸೃಷ್ಟಿ ಮಾಡಿರುತ್ತೇವೆ ಎಂದರೆ

ಸರಿಯಲ್ಲ. ನನಗಾಗಲೀ , ಚಾಸಾ 2 ರಿಂದ 4 ರವರಿಗೆ ಯಾವುದೇ ಗಾಯಗಳಾಗಿರಲಿಲ್ಲ ಎಂದರೆ ಸರಿಯಲ್ಲ. ದೂರುಕೊಟ್ಟ ನಂತರ ಪೊಲೀಸರು ನನ್ನನ್ನು ವಿಚಾರಣೆ ಮಾಡಿಲ್ಲ ಎನ್ನುವುದು ಸರಿ.

ಮರುವಿಚಾರಣೆ ಇಲ್ಲ

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು

ಓ.ಹೇ.ಕೇ.ಸ.ಇದೆ.

ಜೆಎಂಎಫ್‌ಸಿ, ಅರಕಲಗೂಡು

**ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಅರಕಲಗೂಡು**

**ಸಿ ಸಿ ನಂಃ703/2014**

| | | | | | |
|---|---|---|---|---|---|
| **ಸಾಕ್ಷಿಯ ಹೆಸರು** | ಃ | ಡಾ||ರೇವಣ್ಣ | **ದಿನಾಂಕ** | ಃ | **12/02/2020** |
| **ತಂದೆಯ ಹೆಸರು** | ಃ | ಮರಿಬಸವಯ್ಯ | **ಸಿ ಡಬ್ಲ್ಯೂ** | ಃ | **1** |
| **ವಯಸ್ಸು** | ಃ | **48** ವರ್ಷ | **ಪಿ ಡಬ್ಲ್ಯೂ** | ಃ | **1** |
| **ಉದ್ಯೋಗ** | ಃ | ವೈದ್ಯಾಧಿಕಾರಿ, ಕೆ ಆರ್ ಆಸ್ಪತ್ರೆ | | | |
| **ವಿಳಾಸ** | ಃ | ಮೈಸೂರು | | | |

**ಪ್ರಮಾಣ ವಚನ ಬೋಧಿಸಲಾಯಿತು.**
**ಮುಖ್ಯ ವಿಚಾರಣೆ ಸಸಅ ರವರಿಂದ ಃ-**

ನಾನು **2013** ರಿಂದ ಜುಲೈ **2019** ರವರೆಗೆ ಅರಕಲಗೂಡು ಸಾರ್ವಜನಿಕ ಆಸ್ಪತ್ರೆಯಲ್ಲಿ ವೈದ್ಯಾದಿಕಾರಿಯಾಗಿ ಕೆಲಸ ನಿರ್ವಹಿಸಿರುತ್ತೇನೆ.

ದಿಃ**26/03/2014**ರಂದು ನಾನು ಕರ್ತವ್ಯದಲ್ಲಿ ಇದ್ದು ರೂಮ್ ನಂ **15** ರಲ್ಲಿ ಹೊರರೋಗಿ ಚಿಕಿತ್ಸೆ ವಿಭಾಗದಲ್ಲಿ ಕೆಲಸ ಮಾಡುತ್ತಿದ್ದಾಗ ಸುಮಾರು **11.00** ಗಂಟೆ ಸಮಯಕ್ಕೆ ಇಬ್ಬರು ವ್ಯಕ್ತಿಗಳು ಕೂಗಾಡಿ ಕರ್ತವ್ಯಕ್ಕೆ ಅಡ್ಡಿಪಡಿಸಿದರು. ಅವರನ್ನು ಪ್ರಶ್ನಿಸಿದಾಗ ನನಗೆ ಹಲ್ಲೆ ಮಾಡಲು ಯತ್ನಿಸಿದರು. ಅವಾಚ್ಯ ಶಬ್ದಗಳಿಂದ ಬೈಯ್ದು ಎಳೆದಾಡಿದರು. ಸಾರ್ವಜನಿಕರಿಗೆ ತೊಂದರೆಯಾಗುತ್ತದೆ ಸಮಾದಾನದಿಂದ ಇರಿ ಎಂದು ಆರೋಪಿತರಿಗೆ ಹೇಳಿದೆನು. ಅವರನ್ನು ಹಲ್ಲೆಗೆ ಪ್ರಯತಿನಸಿದಾಗ ಸಿಬ್ಬಂದಿಗಳಾದ ಚಾಸಾ **2** ರಿಂದ **4** ರವರು ಸಮಾದಾನಪಡಿಸಿದರು. ಅವರ ಮೇಲೂ ಸಹ ಆರೋಪಿತರು ಕೂಗಾಡಿ ಎಳೆದಾಡಿದರು. ಕೈಗಳಿಂದ ಆರೋಪಿತರು ಬಲಮುಂಗೈಗೆ ಕೈಯಿಂದ ಹಲ್ಲೆ ಮಾಡಿದರು. ಈ ಬಗ್ಗೆ ದೂರು ಕೊಟ್ಟೆ.. ನಾನು ಮತ್ತು ಚಾಸಾ **2** ರಿಂದ **4** ರವರು ಚಿಕಿತ್ಸೆ ಪಡೆದೆವು. ನಂತರ ಈ ಬಗ್ಗೆ ದೂರು ಕೊಟ್ಟಿರುತ್ತೇನೆ. ದೂರನ್ನು ನಿಪಿ **1** ಎಂದು, ಸಾಕ್ಷಿ ಸಹಿಯನ್ನು ನಿಪಿ **1**ಎ ಎಂದು ಗುರುತಿಸಲಾಯಿತು. **2**ನೇ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ. **1**ನೇ ಆರೋಪಿಯ ಹಾಜರಾತಿಯಿಂದ ವಿನಾಯಿತಿ ಪಡೆದಿದ್ದು ನೋಡಿದರೆ ಗುರುತಿಸುವುದಾಗಿ ಹೇಳಿರುತ್ತಾರೆ. ಗುರುತಿಸುವ ಬಗ್ಗೆ ತಕರಾರು ಇಲ್ಲ ಎಂದು ಆರೋಪಿ ಪರ ವಕೀಲರು ತಿಳಿಸಿರುತ್ತಾರೆ.

ನಂತರ ಪೊಲೀಸರು ಮದ್ಯಾಹ್ನ **1.00** ಗಂಟೆಗೆ ಮಹಜರ್ ಮಾಡಲು ಬಂದರು. ಮಹಜರ್ ಗೆ ನಾನು ಮಾಡಿರುತ್ತೇನೆ. ಆಗ ನಮ್ಮ ಗ್ರೂಪ್ ಡಿ ನೌಕರರು ಇದ್ದರು. ಮಹಜರನ್ನು ನಿಪಿ **2** ಎಂದು, ಸಾಕ್ಷಿಯ ಸಹಿಯನ್ನು ನಿಪಿ **2**ಎ ಎಂದು ಗುರುತಿಸಲಾಯಿತು. ಆರೋಪಿತರ ಕೃತ್ಯದಿಂದ ಸಾರ್ವಜನಿಕರಿಗೆ ತೊಂದರೆಯಾಯಿತು. ಘಟನೆ ಬಗ್ಗೆ ಹೇಳಿಕೆ ಕೊಟ್ಟಿರುತ್ತೇನೆ.

( ಈ ಹಂತದಲ್ಲಿ ಮಾನ್ಯ ಸಸಅರವರು ಸದರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ನೀಡಲಾಯಿತು )

ಪಾಟೀ ಸವಾಲು ಃಸಸಅರವರಿಂದ,

ಆರೋಪಿತರ ಕೃತ್ಯದಿಂದ ಕರ್ತವ್ಯಕ್ಕೆ ಅಡ್ಡಿಯಾಯಿತು ಎಂದರೆ ಸರಿ. ಚಾಸಾ**3** ರವರಿಗೆ ಹಲ್ಲೆ ಮಾಡಿದ್ದರಿಂದ ಅಪಮಾನ ಆಯಿತು ಎನ್ನುವುದು ಸರಿ. ಅದೇ ದಿನ ಸಂಜೆ **4.30** ರಿಂದ **5.30** ಸುಮಾರಿಗೆ ನಿಪಿ **2** ರಂತೆ ಮಹಜರ್ ಮಾಡಿದರು. ಚಾಸಾ **6, 7** ರವರು ಸ್ಥಳದಲ್ಲಿ ಸಹಿ ಮಾಡಿದರು ಎನ್ನುವುದು ಸರಿ. ನಂತರ ಮರುಹೇಳಿಕೆಯಲ್ಲಿ ನಾನು **1**ನೇ ಆರೋಪಿ ಚಾಸಾ **2** ರವರಿಗೆ ಕೈಯಿಂದ ಹಲ್ಲೆ ಮಾಡಿ ಉಗುರಿನಿಂದ ಪರಚಿ ಗಾಯಪಡಿಸಿರುತ್ತಾರೆ ಮತ್ತು ಎದೆಗೆ ಹಲ್ಲೆ ಮಾಡಿರುತ್ತಾರೆ ಹಾಗೂ **2**ನೇ ಆರೋಪಿ ಕೈಯಿಂದ ಚಾಸಾ **3** ರವರಿಗೆ ಬಲರಟ್ಟೆ , ಕೆನ್ನೆಗೆ ಹೊಡೆದು ನೋವುಪಡಿಸಿದ್ದರು. ಚಾಸಾ **4** ರವರಿಗೆ **2**ನೇ ಆರೋಪಿ ಕೈಯಿಂದ ಮೈಮುಟ್ಟಿ ನೂಕಿ ಮಾನಕ್ಕೆ ಕುಂದುಂಟು ಮಾಡಿರುತ್ತಾರೆ ಎಂದು ಹೇಳಿಕೆ ಕೊಟ್ಟಿರುತ್ತೇನೆ ಎಂದರೆ ಸರಿ.

ಆರೋಪಿ ಪರ ಪಾಟೀ ಸವಾಲುಃ- ಶ್ರೀ ಬಿ ಸಿ ಆರ್ ವಕೀಲರಿಂದ,

ಘಟನೆಯಾಗುವ **9** ತಿಂಗಳು ಮೊದಲು ನಾನು ಇಲ್ಲಿಗೆ ವರ್ಗಾವಣೆಯಾಗಿದ್ದೆ. ನಾನು ಕೊಠಡಿ ಸಂಖ್ಯೆ **15** ರಲ್ಲಿ ಬೆಳಿಗ್ಗೆ **9.45** ಹಾಜರಿದ್ದೆ. ನನಗೆ **8.15** ರಿಂದ ಕರ್ತವ್ಯ ಪ್ರಾರಂಭವಾಗುತ್ತದೆ ಆದರೆ ಅವತ್ತು ಮಾಸಿಕ ಸಭೆ ಮುಗಿಸಿ ಕರ್ತವ್ಯಕ್ಕೆ ಹಾಜರಾಗಿದ್ದೆ. ಅದೇ ಸಾಲಿನಲ್ಲಿ ನಾಲ್ಕು ಓ ಪಿ ಡಿ ಕೊಠಡಿಗಳು ಇವೆ. ಕೊಠಡಿ ಮುಂದೆ **4** ಅಡಿ ಜಾಗ ತಿರುಗಾಡಲು ಇದೆ ಎಂದರೆ ಸರಿ. ಸುಮಾರು **50 – 60** ರೋಗಿಗಳು ಇದ್ದರು. ಆಸ್ಪತ್ರೆಯಲ್ಲಿ ಸುಮಾರು **100 – 150** ರಷ್ಟು ರೋಗಿಗಳು ಹಾಜರಿರುತ್ತಾರೆ ಎಂದರೆ ಇರಬಹುದು. ನಾನು ಮೀಟಿಂಗಿಗೆ ಹೋದ ವಿಚಾರ ಮೊದಲೇ ತಿಳಿಸಿದ್ದರಿಂದ ರೋಗಿಗಳು ಪ್ರಶ್ನೆ ಮಾಡಿಲ್ಲ. ಅಲ್ಲಿ ರೋಗಿಗಳು ಮಾತನಾಡಿ ಗಲಾಟೆ ಮಾಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ರೋಗಿಗಳು ಕ್ಯೂ ಮಾಡುವ ವಿಚಾರಕ್ಕೆ ಸಾಲಾಗಿ ನಿಲ್ಲುವ ವಿಚಾರಕ್ಕೆ ಜಗಳ ಮಾಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ರೋಗಿಗಳು ಮೊದಲು ತೋರಿಸಿಕೊಳ್ಳುವ ಸಲುವಾಗಿ ನೂಕಾಗಿ ಜಗಳ ಮಾಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ಆರೋಪಿತರು ಆ ದಿನ ರೋಗಿಗಳನ್ನು ಬೇಗ ನೋಡಿ ಎಂದು ಕೂಗಾಡಿ ಗಲಾಟೆ ಮಾಡಿಲ್ಲ, ಎಳೆದಾಡಿಲ್ಲ, ಅವಾಚ್ಯ ಶಬ್ದಗಳಿಂದ ಬೈಯ್ದಿಲ್ಲ, ಹಲ್ಲೆ ಮಾಡಿಲ್ಲ ಎಂದರೆ ಸರಿಯಲ್ಲ. ಗಲಾಟೆ **10** ರಿಂದ **15** ನಿಮಿಷದಷ್ಟು ನಡೆದಿರುತ್ತದೆ. ಆ ದಿನ ಯಾವುದೇ ಗಲಾಟೆ ನಡೆದಿಲ್ಲ ನಾನು ಸಮಾದಾನಪಡಿಸಿಲ್ಲ, ಆರೋಪಿತರು ಚಾಸಾ **2** ರಿಂದ **4** ರವರು ಸಹ ಗಲಾಟೆ ಮಾಡಿಲ್ಲ ಎಳೆದಾಡಿಲ್ಲ ಅವಾಚ್ಯ ಶಬ್ದಗಳಿಂದ ಬೈದಿಲ್ಲ ಎಂದರೆ ಸರಿಯಲ್ಲ. ಚಾಸಾ **4** ರವರಿಗೆ ಅವಮಾನವಾಗುವಂತೆ ಎಳೆದಾಡಿಲ್ಲ, ಅವರು ಸ್ಥಳಕ್ಕೆ ಬಂದಿರಲಿಲ್ಲ ಎಂದರೆ ಸರಿಯಲ್ಲ. ಆ ದಿನ ನನಗಾಗಲೀ, ಚಾಸಾ **2** ರಿಂದ **4** ರವರಿಗಾಗಲೀ ಕರ್ತವ್ಯ ನಿರ್ವಹಿಸಲು ಯಾವುದೇ ಅಡ್ಡಿಯಾಗಿಲ್ಲ ಎಂದರೆ ಸರಿಯಲ್ಲ. ನಾನು ಆಡಳಿತ ವೈದ್ಯಾದಿಕಾರಿಗಳಿಗೆ ಫೋನ್ ಮೂಲಕ ತಿಳಿಸಿದೆ. ಅವರು ಮೀಟಿಂಗಿನಲ್ಲಿ ಇದ್ದರು. ನಂತರ ಸ್ಥಳಕ್ಕೆ ಬಂದು ನೋಡಿರುತ್ತಾರೆ. ಅವರಿಗೆ ಮೌಖಿಕವಾಗಿ ತಿಳಿಸಿ ದೂರು ಕೊಟ್ಟಿರುತ್ತೇನೆ. ಆ ದಿನ ಎಂದಿನಂತೆ ಕರ್ತವ್ಯ ನಿರ್ವಹಿಸಿರುತ್ತೇನೆ, ನಂತರ ಯಾವುದೇ ತೊಂದರೆಯಾಗಿಲ್ಲ ಎನ್ನುವುದು ಸರಿ. ದೂರು ಕೊಡಲು **1.00** ಗಂಟೆಗೆ ಹೋಗಿದ್ದೆ. ನಿಪಿ **2** ಕ್ಕೂ ಅಲ್ಲೇ ಸಹಿ ಮಾಡಿರುತ್ತೇನೆ. ಚಾಸಾ **6, 7** ರವರು ಸಹ ಠಾಣೆಯಲ್ಲಿ ಸಹಿ ಮಾಡಿದರು. ಡಾಃ ಧರಣೇಶ್ ರವರು ಸಿ ಎಂ ಓ ಕರ್ತವ್ಯದಲ್ಲಿ ಇದ್ದರು. ಆ ದಿನ ನಾನು ಚಿಕಿತ್ಸೆ ಪಡೆದಿಲ್ಲ ನಮ್ಮ ಸಿಬ್ಬಂದಿಯಾದ್ದರಿಂದ ಅವುಗಳನ್ನು ಸೃಷ್ಟಿ ಮಾಡಿರುತ್ತೇವೆ ಎಂದರೆ

ಸರಿಯಲ್ಲ. ನನಗಾಗಲೀ , ಚಾಸಾ **2** ರಿಂದ **4** ರವರಿಗೆ ಯಾವುದೇ ಗಾಯಗಳಾಗಿರಲಿಲ್ಲ ಎಂದರೆ ಸರಿಯಲ್ಲ. ದೂರುಕೊಟ್ಟ ನಂತರ ಪೊಲೀಸರು ನನ್ನನ್ನು ವಿಚಾರಣೆ ಮಾಡಿಲ್ಲ ಎನ್ನುವುದು ಸರಿ.

ಮರುವಿಚಾರಣೆ ಇಲ್ಲ

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು

ಓ.ಹೇ.ಕೇ.ಸ.ಇದೆ.

ಜೆಎಂಎಫ್‌ಸಿ, ಅರಕಲಗೂಡು

## ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಅರಕಲಗೂಡು

**ಸಿ ಸಿ ನಂಃ 525/2016**

| | | | | | |
|---|---|---|---|---|---|
| **ಸಾಕ್ಷಿಯ ಹೆಸರು** | ಃ | ಟಿ ಎನ್ ಮಂಜುನಾಥ | **ದಿನಾಂಕ** | ಃ | **11/03/2020** |
| **ತಂದೆಯ ಹೆಸರು** | ಃ | ಎಸ್ ನಂಜೇಗೌಡ | **ಸಿ ಡಬ್ಲ್ಯೂ** | ಃ | **2** |
| **ವಯಸ್ಸು** | ಃ | **59 ವರ್ಷ** | **ಪಿ ಡಬ್ಲ್ಯೂ** | ಃ | **2** |
| **ಉದ್ಯೋಗ** | ಃ | ಆಹಾರ ಶಿರಸ್ತೇದಾರರು, | | | |
| **ವಿಳಾಸ** | ಃ | ಅರಕಲಗೂಡು. | | | |

**ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಸಸಅ ರವರಿಂದ ಃ-**

**ನಾನು 19.06.2015** ರಿಂದ ಇಲ್ಲಿಯವರೆಗೆ ಆಹಾರ ಶಿರಸ್ತೇದಾರರಾಗಿ ಅರಕಲಗೂಡಿನಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ಚಾಸಾ **1** ನನ್ನ ಸಹೋದ್ಯೋಗಿ. **ದಿಃ 08.12.2015 ರಂದು** ಸಂಜೆ **5** ಗಂಟೆ ಸಮಯದಲ್ಲಿ ಅನಾಮದೇಯ ವ್ಯಕ್ತಿ ಒಬ್ಬ ನಮ್ಮ ಕಚೇರಿಗೆ ಬಂದು ಮಸೀದಿ ರಸ್ತೆಯಲ್ಲಿ ಕಾರಿಗೆ ಗ್ಯಾಸ್ ರೀಪಿಲ್ ಮಾಡುತ್ತಿದ್ದಾರೆ ಎಂದು ತಿಳಿಸಿದರು. ಆ ದಿನ ನನಗೆ ತುರ್ತು ಮೀಟಿಂಗ್ ಇದ್ದುದರಿಂದ ಚಾಸಾ **2** ರವರನ್ನು ಏನಾಗಿದೆ ನೋಡಿ ಎಂದು ಕಳುಹಿಸಿರುತ್ತೇನೆ. ಆಗ ಚಾಸಾ **1** ರವರು ಮಾರುತಿ ಓಮಿನಿ ಕಾರಿಗೆ ಗ್ಯಾಸ್ ರೀಪಿಲ್ ಮಾಡುತ್ತಿದ್ದಾರೆ ಏನು ಮಾಡುವುದು ನನಗೆ ತಿಳಿಸಿದರು ಪೊಲೀಸರಿಗೆ ದೂರು ಕೊಡಿ ಎಂದು ಹೇಳಿದೆನು. ನಾನು ಪೊಲೀಸರಿಗೆ ಹೇಳಿಕೆ ಕೊಟ್ಟಿಲ್ಲ.

( ಈ ಹಂತದಲ್ಲಿ ಮಾನ್ಯ ಸಸಅರವರು ಸದರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ನೀಡಲಾಯಿತು )

ಪಾಟೀ ಸವಾಲು ಃಸಸಅರವರಿಂದ,

ಆ ದಿನ ಆರೋಪಿತರು ಕೆಎ-**01** ಪಿ-**5270** ರ ಮಾರುತಿ ಓಮಿನಿ ವಾಹನಕ್ಕೆ ಹೆಚ್ ಪಿ ಕಂಪನಿಯ ಸಿಲಿಂಡರ್ ನಿಂದ ಸ್ವಿಚ್ ಬೋರ್ಡ್ ಮತ್ತು ಎಂ ಓ**1** ನ್ನು ಉಪಯೋಗಿಸಿ ಗ್ಯಾಸ್ ರೀಪಿಲ್ ಮಾಡುತ್ತಿದ್ದರು ಆಗ ಚಾಸಾ **1** ದಾಳಿ ಮಾಡಿ ಅವುಗಳನ್ನು ವಶಪಡಿಸಿಕೊಂಡಿದ್ದನ್ನು ನಾನು ಮತ್ತು ಚಾಸಾ

1 ಪೊಲೀಸರ ಮುಂದೆ ಹಾಜರುಪಡಿಸಿರುತ್ತೇವೆ ಎಂದರೆ ಸರಿಯಲ್ಲ. ಆರೋಪಿತರು ಹೆಸರು ವಿಳಾಸ ಮತ್ತು ಓಮಿನಿ ವಾಹನದ ಸಂಖ್ಯೆಯನ್ನು ಹೇಳಿ ಹೇಳಿಕೆ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಈಗ ಓದಿ ಹೇಳಿದಂತೆ ಹೇಳಿಕೆ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಹೇಳಿಕೆಯನ್ನು ನಿಪಿ 6 ಎಂದು ಗುರುತಿಸಲಾಯಿತು. ಎಂ ಓ 1 ನ್ನು ಆ ದಿನ ವಶಪಡಿಸಿಕೊಂಡರು ಎಂದರೆ ನಾನು ನೋಡಿಲ್ಲ. ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು : 1ನೇ ಆರೋಪಿಯ ಪರ ಶ್ರೀ. ಆರ್ ಹೆಚ್ ಕೆ ವಕೀಲರಿಂದ,**

ಆ ದಿನ 5.00 ರಿಂದ 7.00 ಗಂಟೆಯವರೆಗೆ ಮೀಟಿಂಗ್ ಇತ್ತು. ಆ ದಿ ಯಾವುದೇ ಅನಾಮದೇಯ ವ್ಯಕ್ತಿ ನನಗೆ ಮಾಹಿತಿ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಅಂಕಿಅಂಶಕ್ಕೋಸ್ಕರ ಚಾಸಾ 1 ರವರ ಕಡೆಯವರ ಕಡೆಯಿಂದ ದೂರು ಕೊಡಿಸಿರುತ್ತೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು : 2ನೇ ಆರೋಪಿಯ ಪರ ಶ್ರೀ. ಎಸ್ ಆರ್ ವಕೀಲರಿಂದ,**

ಮೇಲಿನ ಪಾಟೀ ಸವಾಲನ್ನು ಅಳವಡಿಸಿಕೊಳ್ಳುವುದಾಗಿ ತಿಳಿಸಿರುತ್ತಾರೆ.

**( ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು )**

**ಓ.ಹೇ.ಕೇ.ಸ.ಇದೆ.**

**ಜೆಎಂಎಫ್‌ಸಿ, ಅರಕಲಗೂಡು.**

**ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಅರಕಲಗೂಡು**

**ಸಿ ಸಿ ನಂಃ 525/2016**

| | | | | | |
|---|---|---|---|---|---|
| **ಸಾಕ್ಷಿಯ ಹೆಸರು** | ಃ | ಎಸ್ ಜೆ ನಟರಾಜು | **ದಿನಾಂಕ** | ಃ | **11/03/2020** |
| **ತಂದೆಯ ಹೆಸರು** | ಃ | ಲೇಟ್ ಜವರೇಗೌಡ | **ಸಿ ಡಬ್ಲ್ಯೂ** | ಃ | **01** |
| **ವಯಸ್ಸು** | ಃ | **47 ವರ್ಷ** | **ಪಿ ಡಬ್ಲ್ಯೂ** | ಃ | **01** |
| **ಉದ್ಯೋಗ** | ಃ | ಪ್ರಥಮ ದರ್ಜೆ ಸಹಾಯಕರು,<br>ಪ್ರಾದೇಶಿಕ ಆಯುಕ್ತರ ಕಚೇರಿ, | | | |
| **ವಿಳಾಸ** | ಃ | ಮೈಸೂರು | | | |

**ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಸಸಅ ರವರಿಂದ ಃ-**

**ನಾನು 04.09.2015** ರಿಂದ **3** ವರ್ಷಗಳ ಕಾಲ ಆಹಾರ ನಿರೀಕ್ಷಕರಾಗಿ ಅರಕಲಗೂಡಿನಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ **.**

**ದಿಃ 08.12.2015 ರಂದು** ಒಬ್ಬ ವ್ಯಕ್ತಿ ನಮ್ಮ ಕಚೇರಿಗೆ ಬಂದು ಸುಹೀಲ್ ಎಂಬುವರು ಓಮಿನಿ ಕಾರಿಗೆ ಗ್ಯಾಸ್ ರೀಪಿಲ್ ಮಾಡುತ್ತಾರೆ ಎಂದು ತಿಳಿಸಿರುತ್ತಾರೆ. ಆ ಸಂದರ್ಭದಲ್ಲಿ ನಮ್ಮ ಕಚೇರಿಯಲ್ಲಿ ಚಾಸಾ **2** ಇದ್ದರು. ಚಾಸಾ **2** ರವರು ನನಗೆ ಮೀಟಿಂಗ್ ಇದೆ ನೀವೇ ಹೋಗಿ ನೋಡಿ ಎಂದು ಹೇಳಿದರು. ಆಗ ನಾನು ಅರಕಲಗೂಡು ಮುಸಲ್ಮಾನ ಬೀದಿಗೆ ಸಂಜೆ **5.30** ಸಮಯಕ್ಕೆ ಹೋಗಿ ನೋಡಲಾಗಿ ಅಲ್ಲಿ ರೀಫಿಲ್ ಮಾಡುತ್ತಿದ್ದರು. ಸ್ಥಳದಲ್ಲಿ ಒಂದು ಸಿಲಿಂಡರ್, ಪೈಪ್ ಸ್ವಿಚ್ ಬೋರ್ಡ್, ಸಿಲಿಂಡರಿನಿಂದ ಮಾರುತಿ ವ್ಯಾನ್ ಸಂಖ್ಯೆ ಕೆಎ**-01** ಪಿ**-5270** ಗ್ಯಾಸ್ ರೀಪಿಲ್ ಯಂತ್ರದಿಂದ ರೀಫಿಲ್ ಮಾಡುತ್ತಿದ್ದರು**..** ಆರೋಪಿತರು ನಾನು ಹತ್ತಿರ ಹೋಗುತ್ತಿದ್ದಂತೆ ಆರೋಪಿತರು ಸ್ಥಳದಿಂದ ಓಡಿಹೋದರು. ನಂತರ ಅವುಗಳನ್ನು ಠಾಣೆಗೆ ತಂದು ದೂರು ಕೊಟ್ಟಿರುತ್ತೇನೆ ದೂರನ್ನು ನಿಪಿ **1**ಎಂದು, ಸಾಕ್ಷಿಯ ಸಹಿಯನ್ನು ನಿಪಿ **1**(ಎ) ಎಂದು ಗುರುತಿಸಲಾಯಿತು. ಆ ದಿನ ಪೊಲೀಸರಿಗೆ ತಂದು ಹಾಜರುಪಡಿಸಿದ ಗ್ಯಾಸ್ ಪಿಲ್ಲಿಂಗ್ ಮಿಶನ್ ನ್ನು ಗುರುತಿಸಿದ್ದು ಅದನ್ನು ಎಂ ಓ **1** ಎಂದು ಗುರುತಿಸಲಾಯಿತು. ಸಿಲಿಂಡರಿನ ಪೋಟೋ

ಗುರುತಿಸಿದ್ದು ನಿಪಿ **2** ಎಂದು ಗುರುತಿಸಲಾಯಿತು. ಮಾರುತಿ ಓಮಿನಿ ಕಾರು ಪೋಟೋವನ್ನು ನಿಪಿ **3** ಎಂದು ಗುರುತಿಸಲಾಯಿತು.

ಅದೇ ದಿನ ಪೊಲೀಸರು **8.00** ರಿಂದ **8.45** ರವರೆಗೆ ಅಮಾನತು ಮಹಜರ್ ಮಾಡಿ ವಸ್ತುಗಳನ್ನು ವಶಪಡಿಸಿಕೊಂಡರು. ಅಮಾನತು ಮಹಜರನ್ನು ನಿಪಿ **4** ಎಂದು ಸಾಕ್ಷಿಯ ಸಹಿಯನ್ನು ನಿಪಿ **4**(ಎ) ಎಂದು ಗುರುತಿಸಲಾಯಿತು. ಆ ಸಮಯದಲ್ಲಿ ನನ್ನ ಜೊತೆ ಚಾಸಾ **3** ಮತ್ತು **4** ಇದ್ದರು. ಸ್ಥ,ಳ ಮಹಜರ್ ನಲ್ಲಿ ಸಾಕ್ಷಿ ತನ್ನ ಸಹಿಯನ್ನು ಗುರುತಿಸಿದ್ದು ನಿಪಿ **4** ಎಂದು, ಸಾಕ್ಷಿಯ ಸಹಿಯನ್ನು **5**(ಎ) ಎಂದು ಗುರುತಿಸಲಾಯಿತು. ನಿಪಿ **5**ಕ್ಕೆ ಮತ್ತೆ ಯಾರು ಸಹಿ ಮಾಡಿದರು ಗೊತ್ತಿಲ್ಲ. ಸದರಿ ಮಹಜರನ್ನು ಅದೇ ದಿನ ಸ್ಥಳದಲ್ಲಿ **8.00 – 8.45** ಸುಮಾರಿಗೆ ಬರೆದಿರುತ್ತಾರೆ. ಆ ದಿನ ಓಡಿಹೋದ ಆರೋಪಿತರನ್ನು ದೂರದಿಂದ ನೋಡಿದ್ದು, ಆರೋಪಿತರು ಯಾರು ಎಂದು ಗುರುತಿಸಲಾಗುವುದಿಲ್ಲ.

( ಈ ಹಂತದಲ್ಲಿ ಮಾನ್ಯ ಸಸಅರವರು ಸದರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ನೀಡಲಾಯಿತು )

ಪಾಟೀ ಸವಾಲು ಃಸಸಅರವರಿಂದ,

ನಿಪಿ **5** ನ್ನು ದಿನಾಂಕ **09.12.2015** ರಂದು ಬೆಳಗ್ಗೆ **11.00** ರಿಂದ **11.30** ರವರೆಗೆ ಘಟನಾ ಸ್ಥಳದಲ್ಲಿ ಬರೆದರು ನಾನೇ ಸ್ಥಳ ತೋರಿಸಿದೆ ಎಂದರೆ ಸರಿ. ಆ ಸಂದರ್ಭದಲ್ಲಿ ಚಾಸಾ **5** ಮತ್ತು **6** ಸ್ಥಳದಲ್ಲಿ ಇದ್ದರು ಎನ್ನುವುದು ಸರಿ. ಆ ದಿನ ಗ್ಯಾಸ್ ಫಿಲ್ ಮಾಡುತ್ತಿದ್ದವರು ಸುಹೀಲ್ ಮತ್ತು ಗಿರೀಶ ಎಂಬುದಾಗಿ ನಿಪಿ **1** ದೂರಿನಲ್ಲಿ ಹೇಳಿ ಬರೆಸಿರುತ್ತೇನೆ ಎನ್ನುವುದು ಸರಿ.

**ಪಾಟೀ ಸವಾಲು ಃ 1ನೇ ಆರೋಪಿಯ ಪರ ಶ್ರೀ. ಆರ್ ಹೆಚ್ ಕೆ ವಕೀಲರಿಂದ,**

ನಾನು ಗ್ರಾಮ ಲೆಕ್ಕಾಧಿಕಾರಿ ಹುದ್ದೆಯಿಂದ ಆಹಾರ ನಿರೀಕ್ಷಕನಾಗಿ ಪದೋನ್ನತಿ ಹೊಂದಿರುತ್ತೇನೆ. ಆರೋಪಿತರನ್ನು ಈ ದಿನ ಮೊದಲು ನೋಡುತ್ತಿದ್ದೇನೆ ಎಂದರೆ ಸರಿ. ಚಾಸಾ **2** ಮತ್ತು ನಾನು ಕೊಠಡಿ ಬೇರೆ ಬೇರೆ ಎಂದರೆ ಸರಿಯಲ್ಲ. ಆ ದಿನ ವಿಚಾರ ತಿಳಿಸಿ ಹೊರಟುಹೋದರು. ನಮ್ಮ ಇಲಾಖೆಗೆ ಸಂಬಂದಿಸಿದ ದೂರು ಬಂದಾಗ ನಾವು ಮೇಲಾಧಿಕಾರಿಗಳಿಗೆ ತಿಳಿಸಬೇಕು ಎಂದರೆ ಸರಿ. ಬಾತ್ಮಿ ಬಂದ ತಕ್ಷಣ ನಾವು ಪೊಲೀಸರಿಗೆ ವಿಚಾರ ತಿಳಿಸಿಲ್ಲ. ಕಚೇರಿಯನ್ನು **5.15** ಗೆ ಬಿಟ್ಟು ಬೈಕಿನಲ್ಲಿ ಪೊಲೀಸ್ ಠಾಣಾ ರಸ್ತೆಯಲ್ಲಿ ಹೋಗಿರುತ್ತೇನೆ. ಅರಕಲಗೂಡು ಸಾಲಿಗೇರಿ

ರಸ್ತೆ ಗೊತ್ತು. 1ನೇ ಆರೋಪಿಯ ಮನೆಗೆ ಅಯೂಬ್ ಅವರ ಮನೆ ಹತ್ತಿರ ಒಂದು ಓಣಿ ಇದೆ ಅಲ್ಲಿ ಹೋಗಬೇಕು ಎಂದರೆ ನನಗೆ ಗೊತ್ತಿಲ್ಲ. ನಾನು ಸ್ಥಳಕ್ಕೆ ಹೋಗಿರುತ್ತೇನೆ ಆದರೆ ಅಯೂಬ್ ಯಾರು ಎಂದು ಗೊತ್ತಿಲ್ಲ. ಓಣಿ ಒಳಗೆ ಹೋಗಿರುತ್ತೇನೆ. ಅಲ್ಲಿ 3 ಅಡಿ ರಸ್ತೆ ಇದೆ ಎಂದರೆ ಸರಿ. ಅಲ್ಲಿ ದೊಡ್ಡ ವಾಹನ ಹೋಗುವುದಿಲ್ಲ ಎಂದರೆ ಸರಿ. ಸ್ಥಳೀಯರಿಂದ ವಿಳಾಸ ತಿಳಿದುಕೊಂಡಿರುತ್ತೇನೆ ಅವರು ಯಾರು ಎಂದು ಹೇಳಲಾಗುವುದಿಲ್ಲ. ಸಿಲಿಂಡರ್ ಕೆಂಪು ಬಣ್ಣದಲ್ಲಿ ಇತ್ತು. ಮಾರುತಿ ಓಮ್ನಿ ಬಿಳಿ ಬಣ್ಣದಲ್ಲಿತ್ತು. ಯಂತ್ರದ ಬಣ್ಣ ಹಾಗೂ ಯಾರ ಕಂಪನಿ ಎಂದು ಹೇಳಲಾಗುವುದಿಲ್ಲ . ನಾನು ಸದರಿ ಯಂತ್ರ ನೋಡದಿರುವ ಕಾರಣ ಸದರಿ ಯಂತ್ರ ಯಾವ ಕಂಪನಿ ಎಂದು ಹೇಳಲಾಗುವುದಿಲ್ಲ ಎಂದರೆ ಸರಿಯಲ್ಲ. ಸದರಿ ಮೋಟಾರ್ ಎಷ್ಟು ಹೆಚ್.ಪಿ. ಎಂದು ಗೊತ್ತಿಲ್ಲ. ನನ್ನ ಎದುರಿಗೆ ಮೋಟಾರ್ ಮೇಲೆ ಪೊಲೀಸರು ಚೀಟಿ ಅಂಟಿಸಿ ಗುರುತಿಸಿಲ್ಲ. ಸಾಲಿಗೇರಿ ರಸ್ತೆ ಜನಸಂದಣಿ ಇರುತ್ತದೆ ಎಂದರೆ ಸರಿ. ಆ ಸ್ಥಳಕ್ಕೆ ಹೋದಾಗ ಯಾರು ಇರಲಿಲ್ಲ. ಸ್ವಿಚ್ ಬೋರ್ಡ್ ಒಡೆದು ಹೋಗಿದೆ ಎಂದರೆ ಸರಿ, ಅವಾಗ ಚೆನ್ನಾಗಿತ್ತು. ವಸ್ತುಗಳನ್ನು ವಶಪಡಿಸಿಕೊಂಡಾಗ ತಹಶೀಲ್ದಾರ್ ಗೆ ವಿಚಾರ ತಿಳಿಸಿಲ್ಲ ನೇರವಾಗಿ ಪೊಲೀಸ್ ಠಾಣೆಗೆ ಹೋಗಿರುತ್ತೇವೆ. ಸ್ಥಳದಲ್ಲಿ 6.30 ಗಂಟೆಯವರೆಗೆ ಇದ್ದೆವು. ಘಟನಾ ಸ್ಥಳದಿಂದ ಠಾಣೆಗೆ ಅರ್ಧ ಕಿ.ಮೀ ದೂರ ಇರುತ್ತದೆ. ಠಾಣೆಗೆ 5 ನಿಮಿಷಕ್ಕೆ ಬಂದು ತಕ್ಷಣ ದೂರು ಕೊಟ್ಟಿರುತ್ತೇನೆ. ನಿಪಿ 1 ನ್ನು ನಾನೇ ಬರೆದಿರುತ್ತೇನೆ. 6.30 ದೂರು ಕೊಟ್ಟಿರುತ್ತೇನೆ. ಮಹಜರ್ ದಾರರಿಗೆ ಎಷ್ಟು ವರ್ಷ ಆಯಿತು ಎಂದು ಹೇಳಲು ಆಗುವುದಿಲ್ಲ. 1ನೇ ಆರೋಪಿ ಸ್ಥ,ಳದಲ್ಲಿರಲಿಲ್ಲ ಯಾವುದೇ ತಪ್ಪು ಮಾಡಿಲ್ಲ ನಾನು ಅಂಕಿಅಂಶಗಳಿಗೋಸ್ಕರ ಸುಳ್ಳು ದೂರು ಕೊಟ್ಟು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು ಃ 2**ನೇ **ಆರೋಪಿ**ಯ **ಪರ ಶ್ರೀ.** ಎಸ್ ಆರ್ **ವಕೀಲರಿಂದ,**

ನನಗೆ 4 ಚಕ್ರ ವಾಹನದ ಚಾಲನಾ ಪರವಾನಿಗೆ ಇದೆ.. ಎಂ ಓ 1 ನ್ನು ಬೈಕಿನಲ್ಲಿ ತಂದಿರುತ್ತೇನೆ. ಕಾರನ್ನು ಪೊಲೀಸರು ತೆಗೆದುಕೊಂಡರು. ಮಹಜರ್ ನಲ್ಲಿ ಏನು ಬರೆದಿದೆ ಗೊತ್ತಿಲ್ಲ ಎಂದರೆ ಸರಿಯಲ್ಲ. ನಿಪಿ 4 ನ್ನು ಪೊಲೀಸರು ಬರೆದಿರುತ್ತಾರೆ. ಆ ದಿನ ನಾನು ಸ್ಥಳಕ್ಕೆ ಹೋಗಿಲ್ಲ ಸ್ಥಳದಲ್ಲಿ ಯಾವುದೇ ರೀಪಿಲ್ ಮಾಡುತ್ತಿರಲಿಲ್ಲ, ಅಮಾನತ್ ಮಹಜರ್ ಮಾಡಿಲ್ಲ ಸ್ಥಳ ಪಂಚನಾಮೆ ಮಾಡಿಲ್ಲ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮಹಜರ್ ಗೆ ಪೊಲೀಸರಿಗೆ ಹೇಳಿದ್ದ ಸಹಿ

ಹಾಕಿದೆ ಅದರಲ್ಲಿ ಏನು ಬರೆದಿದೆ ಗೊತ್ತಿಲ್ಲ ಎಂದರೆ ಸರಿಯಲ್ಲ. ಘಟನಾ ಸ್ಥಳದ ಚಕ್ಕುಬಂದಿ ಹೇಳಲು ಬರುವುಲ್ಲ. ಆರೋಪಿತರು ಯಾವುದೇ ತಪ್ಪು ಮಾಡಿಲ್ಲ ಉದ್ದೇಶಪೂರ್ವಕವಾಗಿ ಪ್ರಕರಣಕ್ಕೆ ಸೇರಿಸಿರುತ್ತೇನೆ ಎಂದರೆ ಸರಿಯಲ್ಲ.

**( ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು )**

**ಓ.ಹೇ.ಕೇ.ಸ.ಇದೆ.**

**ಜೆಎಂಎಫ್‌ಸಿ, ಅರಕಲಗೂಡು.**

## ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಅರಕಲಗೂಡು

**ಸಿ ಸಿ ನಂ:703/2014**

| | | | | | |
|---|---|---|---|---|---|
| **ಸಾಕ್ಷಿಯ ಹೆಸರು** | ಃ | ಡಾ॥ರೇವಣ್ಣ | **ದಿನಾಂಕ** | ಃ | **12/02/2020** |
| **ತಂದೆಯ ಹೆಸರು** | ಃ | ಮರಿಬಸವಯ್ಯ | **ಸಿ ಡಬ್ಲ್ಯೂ** | ಃ | **1** |
| **ವಯಸ್ಸು** | ಃ | **48** ವರ್ಷ | **ಪಿ ಡಬ್ಲ್ಯೂ** | ಃ | **1** |
| **ಉದ್ಯೋಗ** | ಃ | ವೈದ್ಯಾಧಿಕಾರಿ, ಕೆ ಆರ್ ಆಸ್ಪತ್ರೆ | | | |
| **ವಿಳಾಸ** | ಃ | ಮೈಸೂರು | | | |

**ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಸಸಅ ರವರಿಂದ ಃ-**

ನಾನು **2013** ರಿಂದ ಜುಲೈ **2019** ರವರೆಗೆ ಅರಕಲಗೂಡು ಸಾರ್ವಜನಿಕ ಆಸ್ಪತ್ರೆಯಲ್ಲಿ ವೈದ್ಯಾದಿಕಾರಿಯಾಗಿ ಕೆಲಸ ನಿರ್ವಹಿಸಿರುತ್ತೇನೆ.

ದಿಃ**26/03/2014**ರಂದು ನಾನು ಕರ್ತವ್ಯದಲ್ಲಿ ಇದ್ದು ರೂಮ್ ನಂ **15** ರಲ್ಲಿ ಹೊರರೋಗಿ ಚಿಕಿತ್ಸೆ ವಿಭಾಗದಲ್ಲಿ ಕೆಲಸ ಮಾಡುತ್ತಿದ್ದಾಗ ಸುಮಾರು **11.00** ಗಂಟೆ ಸಮಯಕ್ಕೆ ಇಬ್ಬರು ವ್ಯಕ್ತಿಗಳು ಕೂಗಾಡಿ ಕರ್ತವ್ಯಕ್ಕೆ ಅಡ್ಡಿಪಡಿಸಿದರು. ಅವರನ್ನು ಪ್ರಶ್ನಿಸಿದಾಗ ನನಗೆ ಹಲ್ಲೆ ಮಾಡಲು ಯತ್ನಿಸಿದರು. ಅವಾಚ್ಯ ಶಬ್ದಗಳಿಂದ ಬೈಯ್ದು ಎಳೆದಾಡಿದರು. ಸಾರ್ವಜನಿಕರಿಗೆ ತೊಂದರೆಯಾಗುತ್ತದೆ ಸಮಾದಾನದಿಂದ ಇರಿ ಎಂದು ಆರೋಪಿತರಿಗೆ ಹೇಳಿದೆನು. ಅವರನ್ನು ಹಲ್ಲೆಗೆ ಪ್ರಯತಿನಸಿದಾಗ ಸಿಬ್ಬಂದಿಗಳಾದ ಚಾಸಾ **2** ರಿಂದ **4** ರವರು ಸಮಾದಾನಪಡಿಸಿದರು. ಅವರ ಮೇಲೂ ಸಹ ಆರೋಪಿತರು ಕೂಗಾಡಿ ಎಳೆದಾಡಿದರು. ಕೈಗಳಿಂದ ಆರೋಪಿತರು ಬಲಮುಂಗೈಗೆ ಕೈಯಿಂದ ಹಲ್ಲೆ ಮಾಡಿದರು. ಈ ಬಗ್ಗೆ ದೂರು ಕೊಟ್ಟೆ.. ನಾನು ಮತ್ತು ಚಾಸಾ **2** ರಿಂದ **4** ರವರು ಚಿಕಿತ್ಸೆ ಪಡೆದೆವು. ನಂತರ ಈ ಬಗ್ಗೆ ದೂರು ಕೊಟ್ಟಿರುತ್ತೇನೆ. ದೂರನ್ನು ನಿಪಿ **1** ಎಂದು, ಸಾಕ್ಷಿ ಸಹಿಯನ್ನು ನಿಪಿ **1**ಎ ಎಂದು ಗುರುತಿಸಲಾಯಿತು. **2**ನೇ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ. **1**ನೇ ಆರೋಪಿಯ ಹಾಜರಾತಿಯಿಂದ ವಿನಾಯಿತಿ ಪಡೆದಿದ್ದು ನೋಡಿದರೆ ಗುರುತಿಸುವುದಾಗಿ ಹೇಳಿರುತ್ತಾರೆ. ಗುರುತಿಸುವ ಬಗ್ಗೆ ತಕರಾರು ಇಲ್ಲ ಎಂದು ಆರೋಪಿ ಪರ ವಕೀಲರು ತಿಳಿಸಿರುತ್ತಾರೆ.

ನಂತರ ಪೊಲೀಸರು ಮದ್ಯಾಹ್ನ **1.00** ಗಂಟೆಗೆ ಮಹಜರ್ ಮಾಡಲು ಬಂದರು. ಮಹಜರ್ ಗೆ ನಾನು ಮಾಡಿರುತ್ತೇನೆ. ಆಗ ನಮ್ಮ ಗ್ರೂಪ್ ಡಿ ನೌಕರರು ಇದ್ದರು. ಮಹಜರನ್ನು ನಿಪಿ **2** ಎಂದು, ಸಾಕ್ಷಿಯ ಸಹಿಯನ್ನು ನಿಪಿ **2**ಎ ಎಂದು ಗುರುತಿಸಲಾಯಿತು. ಆರೋಪಿತರ ಕೃತ್ಯದಿಂದ ಸಾರ್ವಜನಿಕರಿಗೆ ತೊಂದರೆಯಾಯಿತು. ಘಟನೆ ಬಗ್ಗೆ ಹೇಳಿಕೆ ಕೊಟ್ಟಿರುತ್ತೇನೆ.

( ಈ ಹಂತದಲ್ಲಿ ಮಾನ್ಯ ಸಸಅರವರು ಸದರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ನೀಡಲಾಯಿತು )

ಪಾಟೀ ಸವಾಲು ಃಸಸಅರವರಿಂದ,

ಆರೋಪಿತರ ಕೃತ್ಯದಿಂದ ಕರ್ತವ್ಯಕ್ಕೆ ಅಡ್ಡಿಯಾಯಿತು ಎಂದರೆ ಸರಿ. ಚಾಸಾ3 ರವರಿಗೆ ಹಲ್ಲೆ ಮಾಡಿದ್ದರಿಂದ ಅಪಮಾನ ಆಯಿತು ಎನ್ನುವುದು ಸರಿ. ಅದೇ ದಿನ ಸಂಜೆ **4.30** ರಿಂದ **5.30** ಸುಮಾರಿಗೆ ನಿಪಿ **2** ರಂತೆ ಮಹಜರ್ ಮಾಡಿದರು. ಚಾಸಾ **6, 7** ರವರು ಸ್ಥಳದಲ್ಲಿ ಸಹಿ ಮಾಡಿದರು ಎನ್ನುವುದು ಸರಿ. ನಂತರ ಮರುಹೇಳಿಕೆಯಲ್ಲಿ ನಾನು **1**ನೇ ಆರೋಪಿ ಚಾಸಾ **2** ರವರಿಗೆ ಕೈಯಿಂದ ಹಲ್ಲೆ ಮಾಡಿ ಉಗುರಿನಿಂದ ಪರಚಿ ಗಾಯಪಡಿಸಿರುತ್ತಾರೆ ಮತ್ತು ಎದೆಗೆ ಹಲ್ಲೆ ಮಾಡಿರುತ್ತಾರೆ ಹಾಗೂ **2**ನೇ ಆರೋಪಿ ಕೈಯಿಂದ ಚಾಸಾ **3** ರವರಿಗೆ ಬಲರಟ್ಟೆ , ಕೆನ್ನೆಗೆ ಹೊಡೆದು ನೋವುಪಡಿಸಿದ್ದರು. ಚಾಸಾ **4** ರವರಿಗೆ **2**ನೇ ಆರೋಪಿ ಕೈಯಿಂದ ಮೈಮುಟ್ಟಿ ನೂಕಿ ಮಾನಕ್ಕೆ ಕುಂದುಂಟು ಮಾಡಿರುತ್ತಾರೆ ಎಂದು ಹೇಳಿಕೆ ಕೊಟ್ಟಿರುತ್ತೇನೆ ಎಂದರೆ ಸರಿ.

ಆರೋಪಿ ಪರ ಪಾಟೀ ಸವಾಲುಃ- ಶ್ರೀ ಬಿ ಸಿ ಆರ್ ವಕೀಲರಿಂದ,

ಘಟನೆಯಾಗುವ **9** ತಿಂಗಳು ಮೊದಲು ನಾನು ಇಲ್ಲಿಗೆ ವರ್ಗಾವಣೆಯಾಗಿದ್ದೆ. ನಾನು ಕೊಠಡಿ ಸಂಖ್ಯೆ **15** ರಲ್ಲಿ ಬೆಳಿಗ್ಗೆ **9.45** ಹಾಜರಿದ್ದೆ. ನನಗೆ **8.15** ರಿಂದ ಕರ್ತವ್ಯ ಪ್ರಾರಂಭವಾಗುತ್ತದೆ ಆದರೆ ಅವತ್ತು ಮಾಸಿಕ ಸಭೆ ಮುಗಿಸಿ ಕರ್ತವ್ಯಕ್ಕೆ ಹಾಜರಾಗಿದ್ದೆ. ಅದೇ ಸಾಲಿನಲ್ಲಿ ನಾಲ್ಕು ಓ ಪಿ ಡಿ ಕೊಠಡಿಗಳು ಇವೆ. ಕೊಠಡಿ ಮುಂದೆ **4** ಅಡಿ ಜಾಗ ತಿರುಗಾಡಲು ಇದೆ ಎಂದರೆ ಸರಿ. ಸುಮಾರು **50 – 60** ರೋಗಿಗಳು ಇದ್ದರು. ಆಸ್ಪತ್ರೆಯಲ್ಲಿ ಸುಮಾರು **100 – 150** ರಷ್ಟು ರೋಗಿಗಳು ಹಾಜರಿರುತ್ತಾರೆ ಎಂದರೆ ಇರಬಹುದು. ನಾನು ಮೀಟಿಂಗಿಗೆ ಹೋದ ವಿಚಾರ ಮೊದಲೇ ತಿಳಿಸಿದ್ದರಿಂದ ರೋಗಿಗಳು ಪ್ರಶ್ನೆ ಮಾಡಿಲ್ಲ. ಅಲ್ಲಿ ರೋಗಿಗಳು ಮಾತನಾಡಿ ಗಲಾಟೆ ಮಾಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ರೋಗಿಗಳು ಕ್ಯೂ ಮಾಡುವ ವಿಚಾರಕ್ಕೆ ಸಾಲಾಗಿ ನಿಲ್ಲುವ ವಿಚಾರಕ್ಕೆ ಜಗಳ ಮಾಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ರೋಗಿಗಳು ಮೊದಲು ತೋರಿಸಿಕೊಳ್ಳುವ ಸಲುವಾಗಿ ನೂಕಾಗಿ ಜಗಳ ಮಾಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ಆರೋಪಿತರು ಆ ದಿನ ರೋಗಿಗಳನ್ನು ಬೇಗ ನೋಡಿ ಎಂದು ಕೂಗಾಡಿ ಗಲಾಟೆ ಮಾಡಿಲ್ಲ, ಎಳೆದಾಡಿಲ್ಲ, ಅವಾಚ್ಯ ಶಬ್ದಗಳಿಂದ ಬೈಯ್ದಿಲ್ಲ, ಹಲ್ಲೆ ಮಾಡಿಲ್ಲ ಎಂದರೆ ಸರಿಯಲ್ಲ. ಗಲಾಟೆ **10** ರಿಂದ **15** ನಿಮಿಷದಷ್ಟು ನಡೆದಿರುತ್ತದೆ. ಆ ದಿನ ಯಾವುದೇ ಗಲಾಟೆ ನಡೆದಿಲ್ಲ ನಾನು ಸಮಾದಾನಪಡಿಸಿಲ್ಲ, ಆರೋಪಿತರು ಚಾಸಾ **2** ರಿಂದ **4** ರವರು ಸಹ ಗಲಾಟೆ ಮಾಡಿಲ್ಲ ಎಳೆದಾಡಿಲ್ಲ ಅವಾಚ್ಯ ಶಬ್ದಗಳಿಂದ ಬೈದಿಲ್ಲ ಎಂದರೆ ಸರಿಯಲ್ಲ. ಚಾಸಾ **4** ರವರಿಗೆ ಅವಮಾನವಾಗುವಂತೆ ಎಳೆದಾಡಿಲ್ಲ, ಅವರು ಸ್ಥಳಕ್ಕೆ ಬಂದಿರಲಿಲ್ಲ ಎಂದರೆ ಸರಿಯಲ್ಲ. ಆ ದಿನ ನನಗಾಗಲೀ, ಚಾಸಾ **2** ರಿಂದ **4** ರವರಿಗಾಗಲೀ ಕರ್ತವ್ಯ ನಿರ್ವಹಿಸಲು ಯಾವುದೇ ಅಡ್ಡಿಯಾಗಿಲ್ಲ ಎಂದರೆ ಸರಿಯಲ್ಲ. ನಾನು ಆಡಳಿತ ವೈದ್ಯಾದಿಕಾರಿಗಳಿಗೆ ಫೋನ್ ಮೂಲಕ ತಿಳಿಸಿದೆ. ಅವರು ಮೀಟಿಂಗಿನಲ್ಲಿ ಇದ್ದರು. ನಂತರ ಸ್ಥಳಕ್ಕೆ ಬಂದು ನೋಡಿರುತ್ತಾರೆ. ಅವರಿಗೆ ಮೌಖಿಕವಾಗಿ ತಿಳಿಸಿ ದೂರು ಕೊಟ್ಟಿರುತ್ತೇನೆ. ಆ ದಿನ ಎಂದಿನಂತೆ ಕರ್ತವ್ಯ ನಿರ್ವಹಿಸಿರುತ್ತೇನೆ, ನಂತರ ಯಾವುದೇ ತೊಂದರೆಯಾಗಿಲ್ಲ ಎನ್ನುವುದು ಸರಿ. ದೂರು ಕೊಡಲು **1.00** ಗಂಟೆಗೆ ಹೋಗಿದ್ದೆ. ನಿಪಿ **2** ಕ್ಕೂ ಅಲ್ಲೇ ಸಹಿ ಮಾಡಿರುತ್ತೇನೆ. ಚಾಸಾ **6, 7** ರವರು ಸಹ ಠಾಣೆಯಲ್ಲಿ ಸಹಿ ಮಾಡಿದರು. ಡಾಃ ಧರಣೇಶ್ ರವರು ಸಿ ಎಂ ಓ ಕರ್ತವ್ಯದಲ್ಲಿ ಇದ್ದರು. ಆ ದಿನ ನಾನು ಚಿಕಿತ್ಸೆ ಪಡೆದಿಲ್ಲ ನಮ್ಮ ಸಿಬ್ಬಂದಿಯಾದ್ದರಿಂದ ಅವುಗಳನ್ನು ಸೃಷ್ಟಿ ಮಾಡಿರುತ್ತೇವೆ ಎಂದರೆ

ಸರಿಯಲ್ಲ. ನನಗಾಗಲೀ , ಚಾಸಾ 2 ರಿಂದ 4 ರವರಿಗೆ ಯಾವುದೇ ಗಾಯಗಳಾಗಿರಲಿಲ್ಲ ಎಂದರೆ ಸರಿಯಲ್ಲ. ದೂರುಕೊಟ್ಟ ನಂತರ ಪೊಲೀಸರು ನನ್ನನ್ನು ವಿಚಾರಣೆ ಮಾಡಿಲ್ಲ ಎನ್ನುವುದು ಸರಿ.

ಮರುವಿಚಾರಣೆ ಇಲ್ಲ

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು

ಓ.ಹೇ.ಕೇ.ಸ.ಇದೆ.

ಜೆಎಂಎಫ್‌ಸಿ, ಅರಕಲಗೂಡು

## ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಅರಕಲಗೂಡು

**ಸಿ ಸಿ ನಂಃ72/2018**

| | | | | | |
|---|---|---|---|---|---|
| **ಸಾಕ್ಷಿಯ ಹೆಸರು** | ಃ | ಡಾ||ಮಂಜುನಾಥ್ ವೆಂಕಟಪತಿ | **ದಿನಾಂಕ** | ಃ | **04/12/2019** |
| **ತಂದೆಯ ಹೆಸರು** | ಃ | ಪಿ.ವೆಂಕಟಪತಿ | **ಸಿ ಡಬ್ಲ್ಯೂ** | ಃ | **11** |
| **ವಯಸ್ಸು** | ಃ | **46** ವರ್ಷ | **ಪಿ ಡಬ್ಲ್ಯೂ** | ಃ | **10** |
| **ಉದ್ಯೋಗ** | ಃ | ವೈದ್ಯಾಧಿಕಾರಿ | | | |
| **ವಿಳಾಸ** | ಃ | ಅರಕಲಗೂಡು ಸರ್ಕಾರಿ ಆಸ್ಪತ್ರೆ | | | |

**ಪ್ರಮಾಣ ವಚನ ಬೋಧಿಸಲಾಯಿತು.**
**ಮುಖ್ಯ ವಿಚಾರಣೆ ಸಸಅ ರವರಿಂದ ಃ-**

ನಾನು ಕಳೆದ **4** ವರ್ಷಗಳಿಂದ ಅರಕಲಗೂಡು ಸಾರ್ವಜನಿಕ ಆಸ್ಪತ್ರೆಯಲ್ಲಿ ವೈದ್ಯಾದಿಕಾರಿಯಾಗಿ ಕೆಲಸ ನಿರ್ವಹಿಸುತ್ತಿದ್ದೇನೆ.

ದಿಃ**14/08/2017**ರಂದು ಸಂಜೆ **4-15** ಗಂಟೆ ಸಮಯದಲ್ಲಿ ಚಾಸಾ-**1**ರವರು ಹಲ್ಲೆಯ ಹಿನ್ನೆಲೆಯಲ್ಲಿ ನನ್ನ ಬಳಿ ಚಿಕಿತ್ಸೆಗಾಗಿ ಬಂದಿದ್ದರು. ಅವರು **3-50** ಗಂಟೆ ಸಮಯದಲ್ಲಿ ಹಲ್ಲೆಯಾಗಿದೆ ಎಂದು ತಿಳಿಸಿದರು. ಅವರನ್ನು ಪರೀಕ್ಷಿಸಲಾಗಿಃ-

**1.** ಬಲಕೆನ್ನೆಯಲ್ಲಿ ನೋವಿತ್ತು.

**2.** ಬಲ ಕಿವಿಯ ಕೆಳಭಾಗದಲ್ಲಿ ನೋವಿತ್ತು.

ನನ್ನ ಅಭಿಪ್ರಾಯದಲ್ಲಿ ಈ ಮೇಲೆ ಹೇಳಲಾದ ಗಾಯಗಳು ಸಾಮಾನ್ಯ ಸ್ವರೂಪದ ಗಾಯಗಳಾಗಿದ್ದು, ಈ ಬಗ್ಗೆ ನಾನು ಗಾಯದ ಪ್ರಮಾಣ ಪತ್ರವನ್ನು ನೀಡಿದ್ದು, ಗಾಯದ ಪ್ರಮಾಣ ಪತ್ರವನ್ನು ನಿಪಿ-**11,** ಸಾಕ್ಷಿಯ ಸಹಿಯನ್ನು ನಿಪಿ-**11**(ಎ) ಎಂದು ಗುರ್ತಿಸಲಾಯಿತು. ಕೈಗಳಿಂದ ಹಲ್ಲೆ ಮಾಡಿದಾಗ ಮೇಲೆ ಹೇಳಿದ ಗಾಯಗಳು ಆಗುವ ಸಾಧ್ಯತೆ ಇರುತ್ತದೆ.

ಆರೋಪಿ ಪರ ಪಾಟೀ ಸವಾಲುಃ- ಶ್ರೀ.ಎಸ್.ಆರ್.ಸಿ.ವಕೀಲರಿಂದ,

ಆ ದಿನ ಗಾಯಾಳು ಒಬ್ಬರೆ ಬಂದಿದ್ದರು. ಆಕಸ್ಮಿಕವಾಗಿ ಕಿಟಕಿ ತಾಗಿದಾಗ ನಿಪಿ-**11**ರಲ್ಲಿ ಹೇಳಿರುವ ಗಾಯಗಳು ಆಗುವ ಸಾಧ್ಯತೆ ಇರುತ್ತದೆ ಎಂದರೆ ಸರಿ.

ಮರುವಿಚಾರಣೆ ಇಲ್ಲ
ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು
ಓ.ಹೇ.ಕೇ.ಸ.ಇದೆ.

ಜೆಎಂಎಫ್‌ಸಿ, ಅರಕಲಗೂಡು

**ಸಿವಿಲ್ ನ್ಯಾಯಾಧೀಶರು  ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಅರಕಲಗೂಡು**

**ಸಿ ಸಿ ನಂಃ 3/2011**

| | | | | | |
|---|---|---|---|---|---|
| ಸಾಕ್ಷಿಯ ಹೆಸರು | ಃ | ಡಾಃಶೀದ.ಲ್‌ಕುಮಾರ್ | ದಿನಾಂಕ | ಃ | 24-04-2013 |
| ಗಂಡನ ಹೆಸರು | ಃ | ರಾಜೇಂದ್ರಕುಮಾರ್ | ಸಿ ಡಬ್ಲ್ಯೂ | ಃ | 07 |
| ವಯಸ್ಸು | ಃ | 55 ವರ್ಷ | ಪಿ ಡಬ್ಲ್ಯೂ | ಃ | 07 |
| ಉದ್ಯೋಗ | ಃ | ವೈದ್ಯಾಧಿಕಾರಿ | | | |
| ವಿಳಾಸ | ಃ | ಕೊಣನೂರು | | | |

**ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಸಸಅ ರವರಿಂದ ಃ-**

ನಾನು 4-7-2010 ರಿಂದ ಇಲ್ಲಿಯವರೆವಿಗೆ ಕೊಣನೂರು ಸರ್ಕಾರಿ ಸಾರ್ವಜನಿಕ ಆಸ್ಪತ್ರೆಯಲ್ಲಿ ವೈದ್ಯಾದಿಕಾರಿಯಾಗಿ ಕೆಲಸ ನಿರ್ವಹಿಸಿರುತ್ತೇನೆ.

ದಿಃ 21-9-2010 ರಂದು ಸಂಜೆ 4 ಗಂಟೆ ಸಮಯದಲ್ಲಿ ಚಾಸಾ-1ರವರು ಹಲ್ಲೆಯ ಹಿನ್ನೆಲೆಯಲ್ಲಿ ನನ್ನ ಬಳಿ ಚಿಕಿತೆ ಬಂದಿದ್ದರು.

ಅವರನ್ನು ಪರೀಕ್ಷಿಸಿದಾಗ

6. ಅವರ ಹೊಟ್ಟೆಯ ಮೇಲೆ ನೋವಿನಿಂದ ಕೂಡಿತ್ತು
7. ತಲೆಯ ಹತ್ತಿರ ನೋವಿನಿಂದ ಕೂಡಿತ್ತು
8. ಬಲತೊಡೆಯಲ್ಲಿ ನೋವಿನಿಂದ ಕೂಡಿತ್ತು,
9. ಎಡತೊಡೆಯಲ್ಲಿ 2 5 ಸೆ.ಮೀ ಉದ್ದದ ಕೆಂಪಾದ ಊತದ ಗಾಯವಿತ್ತು
10. ಬೆನ್ನಿನ ಎಡಕೆಳಭಾಗದಲ್ಲಿ 3 6 ಸೆ.ಮೀ ಉದ್ದದ ಕೆಂಪಾದ ಊತದ ಗಾಯವಿತ್ತು

ನನ್ನ ಅಭಿಪ್ರಾಯದಲ್ಲಿ ಈ ಎಲ್ಲಾ ಗಾಯಗಳು ಸಾಮಾನ್ಯ ಸ್ವರೂಪದ ಗಾಯಗಳಾಗಿರುತ್ತವೆ, ಈ ಬಗ್ಗೆ ನಾನು ಗಾಯದ ಪ್ರಮಾಣ ಪತ್ರವನ್ನು ನೀಡಿದ್ದು, ಅದನ್ನು ನಿಪಿ-4, ಸದರಿಯವರ ಸಹಿಯನ್ನು ನಿಪಿ-4ಎ ಎಂದು ಗುರ್ತಿಸಲಾಯಿತು.

ಆ ದಿನ ಆರೋಪಿತರು ಮರದ ದೊಣ್ಣೆಯಿಂದ ಹಲ್ಲೆ ಮಾಡಿರುತ್ತಾರೆ ಎಂದು ಚಾಸಾ.1ರವರು ತಿಳಿಸಿದರು. ಈ ಮೇಲೆ ಹೇಳಲಾದ ಗಾಯಗಳು ಕೈಗಳಿಂದ ಮತ್ತು ಪ್ಲಾಸ್ಟಿಕ್ ಚಪ್ಪಲಿಯಿಂದ ಹಲ್ಲೆ ಮಾಡಿದರು ಎಂದರೆ ಸಾಕ್ಷಿಯು ನೋವು ಮತ್ತು ಊತ ಗಾಯಗಳಾಗಬಹುದು ಎಂಬುದಾಗಿ ಸ್ವತಃ ನುಡಿಯುತ್ತಾರೆ.

ಪಾಟೀ ಸವಾಲು ಃ ಶ್ರೀ ಎ.ಎಸ್. ವಕೀಲರಿಂದ,

ಯಾವುದೇ ವ್ಯಕ್ತಿ ಜಮೀನಿನ ಬದುವಿನಲ್ಲಿ ಆಯ ತಪ್ಪಿ ಬಿದ್ದರೆ ಈ ಮೇಲೆ ಹೇಳಿದ ಗಾಯಗಳಾಗುವ ಸಾಧ್ಯತೆ ಇದೆ ಎಂದರೆ ಸರಿ.

( ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾ.ದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಇದೆ.

ಜೆಎಂಎಫ್‌ಸಿ, ಅರಕಲಗೂಡು.